ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ [ಮಾರ್ಕ್ಸ್‌ವಾದಿ] ಕರ್ನಾಟಕ ರಾಜ್ಯ ಸಮಿತಿಯ ಮುಖಪತ್ರಿಕೆ

ಸಂಪುಟ 4 ಸಂಚಿಕೆ 17 ಏಪ್ರಿಲ್ 25, 1982 ಬೆಲೆ 60 ಪೈಸೆ

ಬೀದರ್ ಕ್ಷೇತ್ರಕ್ಕೆ ಸಿ.ಪಿ.ಐ. (ಎಂ) ಅಭ್ಯರ್ಥಿ

ಬೀದರ್ ಕ್ಷೇತ್ರಕ್ಕೆ ಈ ಸಾರಿ ನಡೆಯಲಿರುವ ವಿಧಾನಸಭಾ ಉಪ ಚುನಾವಣೆಯಲ್ಲಿ ಅಭ್ಯರ್ಥಿಯನ್ನು ನಿಲ್ಲಿಸಲು ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷ ನಿರ್ಧರಿಸಿದೆ.

ಎಲ್ಲಾ ಪ್ರಜಾಪ್ರಭುತ್ವ ಪ್ರೇಮಿಗಳೂ ಸಿ. ಪಿ. ಐ. (ಎಂ) ಅಭ್ಯರ್ಥಿಯನ್ನು ಬೆಂಬಲಿಸಬೇಕೆಂದು ಸಿ. ಪಿ. ಐ. (ಎಂ) ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯ ಕಾಂ। ವಿ.ಜೆ.ಕೆ. ನಾಯರ್ ವಿನಂತಿಸಿದ್ದಾರೆ.

ಗೋಕಾಕ್ ವರದಿ

ಸರಕಾರದ ನಿಲುವನ್ನು ಕುರಿತು.......

ಗೋಕಾಕ್ ವರದಿಯನ್ನು ಜಾರಿಗೆ ತರಬೇಕೆಂದು ಒತ್ತಾಯಿಸಿ ರಾಜ್ಯದಾದ್ಯಂತ ತೀವ್ರ ಚಳುವಳಿ ನಡೆದ ಹಿನ್ನೆಲೆಯಲ್ಲಿ, ಸರಕಾರ ಈ ವರದಿಯ ಕುರಿತು ಒಂದು ತೀರ್ಮಾನಕ್ಕೆ ಬಂದಿದೆ. ಸರಕಾರದ ತೀರ್ಮಾನದ ಕುರಿತು ಸಿ.ಪಿ.ಐ. (ಎಂ) ರಾಜ್ಯ ಸೆಕ್ರೆಟೇರಿಯೆಟ್ ಈ ಕೆಳಕಂಡ ಪತ್ರಿಕಾ ಪ್ರಕಟಣೆ ನೀಡಿದೆ :

"ಭಾಷಾ ಅಲ್ಪ ಸಂಖ್ಯಾತರಿಗೆ ತೊಂದರೆ ಆಗದಂತೆ ಕೆಲವು ಅಗತ್ಯ ತಿದ್ದುಪಡಿಗಳೊಂದಿಗೆ ಗೋಕಾಕ್ ಸಮಿತಿಯ ವರದಿಯನ್ನು ಜಾರಿಗೆ ತಂದಿರುವುದನ್ನು ಮತ್ತು ಎಲ್ಲರೂ ಕಡ್ಡಾಯವಾಗಿ ಕನ್ನಡವನ್ನು ಕಲಿಯುವಂತೆ ಸರ್ಕಾರ ತೆಗೆದುಕೊಂಡಿರುವ ನಿರ್ಧಾರ ಸೂಕ್ತವಾಗಿದೆ."

"ಆದರೆ ಸರಕಾರವು ತನ್ನ ನಿಧಾನ ತಂತ್ರಗಳಿಂದಾಗಿ ಮತ್ತು ನಿಷ್ಕ್ರಿಯತೆಯಿಂದಾಗಿ ಪರಿಸ್ಥಿತಿಯನ್ನು ಗೊಂದಲಮಯವನ್ನಾಗಿ ಮಾಡಿದ್ದಲ್ಲದೆ ಆಳುವ ಪಕ್ಷದಲ್ಲಿರುವ ಕೋಮುವಾದಿಗಳಿಗೆ ಪ್ರೋತ್ಸಾಹ ನೀಡಿ ಇತರೆ ವಿಭಾಗದ ಜನರಲ್ಲಿ ವಿಭಿನ್ನ ರೀತಿಯಾದಂಥ ಭಿನ್ನಾಭಿಪ್ರಾಯಗಳಿಗೆ ಎಡೆಮಾಡಿ ಕೊಟ್ಟಿತ್ತು."

"ಮೊದಲೇ ಸರಕಾರ, ಎಲ್ಲಾ ವಿಭಾಗದ ಜನರ ಅಭಿಪ್ರಾಯವನ್ನು ತೆಗೆದುಕೊಂಡು ಸಂಯಮದಿಂದ ವರ್ತಿಸಿದ್ದರೆ ಗಲಭೆಗಳು ಆಗದಂತೆ ತಡೆಯಬಹುದಾಗಿತ್ತು. 19-4-82 ರಂದು ಮುಖ್ಯಮಂತ್ರಿಯವರು ಕರೆದ ಸಭೆಗೆ ಎಲ್ಲಾ ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನೂ, ಬರಹಗಾರರನ್ನೂ, ಸಾಹಿತಿಗಳನ್ನೂ ಕರೆದು ಚರ್ಚೆ ಮಾಡಿದ್ದರೆ ಇನ್ನೂ ಉತ್ತಮವಾಗುತ್ತಿತ್ತೆಂದು ನಮ್ಮ ಅಭಿಪ್ರಾಯ."

"ಈಗಿನ ಗೊಂದಲಮಯ ವಾತಾವರಣಕ್ಕೆ ಗುಂಡೂರಾಯರ ಸರಕಾರವೇ ನೇರ ಹೊಣೆ, ಏಕೆಂದರೆ ಸಂಸ್ಕೃತವನ್ನು ಪ್ರಥಮ ಭಾಷೆಯನ್ನಾಗಿ ಮಾಡಬೇಕೆಂಬ ಉದ್ದೇಶದಿಂದ ಗೋಕಾಕ್ ಸಮಿತಿಯನ್ನು ರಚಿಸಲಾಗಿತ್ತು. ಇದಕ್ಕೆ ನಮ್ಮ ಪಕ್ಷ ಪ್ರಾರಂಭದಿಂದಲೂ ವಿರೋಧ ವ್ಯಕ್ತಪಡಿಸಿತ್ತು. ಕೊನೆಗೂ ಅಪ್ರಸ್ತುತ ಭಾಷೆಯನ್ನು ಪ್ರಥಮ ಸ್ಥಾನದಿಂದ ತೆಗೆದಿರುವುದಕ್ಕೆ ಸಿ.ಪಿ.ಐ. (ಎಂ) ಸಂತೋಷ ವ್ಯಕ್ತಪಡಿಸುತ್ತದೆ."

"ಕನ್ನಡವನ್ನು ಪ್ರಥಮ ಭಾಷೆ ಎಂಬ ಹಣೆಪಟ್ಟಿ ಅಂಟಿಸುವದರಿಂದ ಮಾತ್ರವೇ ಕನ್ನಡ ಭಾಷೆಯ ಬೆಳವಣಿಗೆಯಾಗುವದೆಂದು ನಮ್ಮ ಪಕ್ಷವು ನಂಬುವದಿಲ್ಲ. ಕನ್ನಡ ಭಾಷೆ ಬೆಳೆಯಬೇಕಾದರೆ ಸರಕಾರ ಪ್ರತಿ ಹಂತದಲ್ಲೂ ಅದನ್ನು ಕಡ್ಡಾಯವಾಗಿ ಆಡಳಿತ ಭಾಷೆಯನ್ನಾಗಿ ಜಾರಿಗೊಳಿಸಲು ಪ್ರಾಮಾಣಿಕ ಪ್ರಯತ್ನ ನಡೆಸಬೇಕು."

"ಆದ್ದರಿಂದ ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಎಲ್ಲಾ ಹಂತದಲ್ಲೂ ಕಡ್ಡಾಯವಾಗಿ ಜಾರಿಗೊಳಿಸಬೇಕೆಂದು ಸಿ. ಪಿ. ಐ. (ಎಂ) ಒತ್ತಾಯಿಸುತ್ತದೆ."

"ನಮ್ಮ ಪಕ್ಷವು ಎಲ್ಲಾ ಜನತೆಯಲ್ಲಿ ವಿನಂತಿಸುವದೇನೆಂದರೆ, ಅವಕಾಶವಾದಿ ಶಕ್ತಿಗಳ ಕುತಂತ್ರಕ್ಕೆ ಬಲಿಯಾಗಿ ಜನತೆಯನ್ನು ಇಬ್ಭಾಗ ಮಾಡುವದು ಸರಿಯಲ್ಲವೆಂದು, ದುಡಿಯುವ ಜನರ ಒಗ್ಗಟ್ಟನ್ನು ಬಲಪಡಿಸುವ ದಿಕ್ಕಿನಲ್ಲಿ ಮುನ್ನಡೆಯಬೇಕೆಂದು ಸಿ.ಪಿ.ಐ. (ಎಂ) ಒತ್ತಾಯಿಸುತ್ತದೆ. ●

ಸಂಪಾದಕೀಯ

ರಾಜ್ಯಭಾಷೆ ಮತ್ತು ತಾಯಿಭಾಷೆ

ಭಾರತದಲ್ಲಿ ಹಲವಾರು ರಾಷ್ಟ್ರಭಾಷೆಗಳಿವೆ. ಭಾರತವನ್ನು ಭಾಷಾವಾರು ಪ್ರಾಂತಗಳಾಗಿ ವಿಂಗಡಿಸಲಾಗಿದೆ. ಈ ರೀತಿ ವಿಂಗಡನೆ ಆದಾಗ ಪ್ರತಿ ರಾಜ್ಯದಲ್ಲೂ ಅಲ್ಪಸಂಖ್ಯಾತರು ಇರುವದು ಸಹಜ.

ಭಾರತದ ಆರ್ಥಿಕ, ಸಾಮಾಜಿಕ ಬೆಳವಣಿಗೆಯನ್ನು ಪ್ರಾದೇಶಿಕವಾರು ನೋಡಿದರೆ ಅಸಮಾನವಾಗಿದೆ. ಕೈಗಾರಿಕೆಗಳ ಬೆಳವಣಿಗೆ, ಕಸಬುದಾರರ ವಲಸೆ, ವಿನಿಮಯ (exchange), ರಾಷ್ಟ್ರ ಮಟ್ಟದ ಚಟುವಟಿಕೆಗಳು ಉದಾ : ರೈಲ್ವೆ, ಅಂಚೆ-ತಂತಿ, ರಕ್ಷಣೆ, ಕೇಂದ್ರ ಸರಕಾರದ ಕಚೇರಿಗಳು, ಉನ್ನತ ವಿದ್ಯಾಭ್ಯಾಸ ಇವುಗಳಿಂದಾಗಿ ಪ್ರತಿ ರಾಜ್ಯಗಳಲ್ಲಿ ಅಲ್ಪಸಂಖ್ಯಾತರು ಆಗಮಿಸುವದೂ, ಕ್ರಮೇಣ ಖಾಯಂ ಆಗಿ ನೆಲೆಸುವದು ಸಹಜ.

ಮೊಗಲ್ ಸಾಮ್ರಾಜ್ಯದಲ್ಲೂ, ಕೆಲವು ರಾಜರ ಆಡಳಿತದಲ್ಲೂ ಆಡಳಿತ ಭಾಷೆಯಾಗಿದ್ದ ಉರ್ದು, ಇಂದು ಪ್ರತ್ಯೇಕ ಭಾಷಾ ರಾಜ್ಯವಿಲ್ಲದೆ, ಹಲವಾರು ರಾಜ್ಯಗಳಲ್ಲಿ ಹರಡಿರುವುದನ್ನು ಕಾಣಬಹುದು. ಇದು ಸಾಮ್ರಾಜ್ಯಶಾಹಿಗಳ ಕುತಂತ್ರ ಮತ್ತು ಕೋಮುವಾದಿಗಳ ಛಿದ್ರಕಾರಿ ಚಟುವಟಿಕೆಯಿಂದಾಗಿ ಭಾರತದ ವಿಭಜನೆ ಆದ ಮೇಲೆ ಉರ್ದು ಭಾಷೆಗಿರುವ ಪ್ರತ್ಯೇಕ ಸಮಸ್ಯೆಯಿದು.

ಭಾರತದ ರಾಜ್ಯಭಾಷೆಗಳಲ್ಲಿ ಆಯಾರಾಜ್ಯಭಾಷೆಗಳು ಆಡಳಿತಭಾಷೆ ಆಗುವುದು ಪ್ರಜಾಸತ್ತೆಯ ಬೆಳವಣಿಗೆಗೆ, ಭದ್ರತೆಗೆ, ಸಾಮಾನ್ಯ ಜನರ ಮುನ್ನಡೆಗೆ ಅಗತ್ಯ.

ಹಾಗೆಯೇ ಇತರ ಭಾಷೆಗಳ ಅಲ್ಪ ಸಂಖ್ಯಾತರಿಗೆ ಅವರವರ ಮಾತೃ ಭಾಷೆಯಲ್ಲಿ ವಿಧ್ಯಾಭ್ಯಾಸ ಮಾಡಲು ಎಲ್ಲ ಅವಕಾಶ ನೀಡುವುದು ಸಹ ಸಮಂಜಸವಾದುದು.

ರಾಜ್ಯಭಾಷೆಯ ಬೆಳವಣಿಗೆ ಮತ್ತು ರಾಜ್ಯಭಾಷೆ ತಾಯಿಭಾಷೆ ಅಲ್ಲದಿರುವವರ ಭಾಷೆಗಳ ರಕ್ಷಣೆ ಅತ್ಯಗತ್ಯ. ಅದೇ ಸಮಯದಲ್ಲಿ ರಾಜ್ಯಭಾಷೆ ಆಡಳಿತ ಭಾಷೆಯಾಗುವುದು ಅತ್ಯಂತ ಸೂಕ್ತವಾದುದು. ರಾಜ್ಯಭಾಷೆ ತಾಯಿಭಾಷೆಯಲ್ಲದವರೂ ರಾಜ್ಯಭಾಷೆಯನ್ನು ಕಲಿಯಬೇಕಾದುದೂ ಅಗತ್ಯವಾಗಿದೆ.

ಇದರಿಂದಾಗಿ ಗೋಕಾಕ್ ವರದಿಯ ಕುರಿತು ಸರಕಾರ ಕೈಗೊಂಡ ತೀರ್ಮಾನ ಸಮಂಜಸ. ಸರಕಾರದ ತೀರ್ಮಾನದಿಂದಾಗಿ ಕನ್ನಡವನ್ನು ಬೇರೆ ಭಾಷೆಗಳ ಮಟ್ಟಕ್ಕಿಳಿಸಿದಂತಾಗಿದೆ ಎಂಬುದು ಸರಿಯಲ್ಲ.

ಕನ್ನಡವನ್ನು ಆಡಳಿತ ಭಾಷೆಯನ್ನಾಗಿ ಮಾಡುವ ದಿಸೆಯಲ್ಲಿ ನಮ್ಮ ರಾಜ್ಯದ ಸಾಹಿತಿಗಳು, ಬರಹಗಾರರು, ಮತ್ತಿತರರು ಗಮನ ಹರಿಸಲಿ.

ಮೇ ೧೯ರಂದು ನಡೆಯಲಿರುವ

ಚುನಾವಣಾ ಹೋರಾಟ

ಮುಂದಿನ ತಿಂಗಳು (ಮೇ) 19 ನೇ ತಾರೀಖು ಪ.ಬಂಗಾಲ, ಕೇರಳ, ಹಿಮಾಚಲ ಪ್ರದೇಶ ಮತ್ತು ಹರ್‍ಯಾಣಾ ವಿಧಾನ ಸಭೆಗಳೂ, ಶಾಸನಸಭೆಗಳ 15 ಸ್ಥಾನಗಳಿಗೂ, ಫಡವಾಲ್ ಲೋಕಸಭಾ ಸ್ಥಾನವೂ ಸೇರಿ ಲೋಕಸಭೆಯ 7 ಕ್ಷೇತ್ರಗಳಿಗೆ ಚುನಾವಣೆ ನಡೆಯಲಿವೆ.

ಪ. ಬಂಗಾಲದಲ್ಲಿ ಅಧ್ಯಕ್ಷರ ಆಳ್ವಿಕೆಯನ್ನು ತಂದು ಮೋಸದ ಚುನಾವಣೆ ನಡೆಸಬೇಕೆಂದು ಕಾಂಗ್ರೆ ನಡೆಸಿದ ಎಲ್ಲಾ ಪ್ರಯತ್ನಗಳು ವಿಫಲವಾಗಿವೆ. ಕೇರಳದಲ್ಲಿ ಕಾಂಗ್ರೆಸ ಅಲ್ಪಮತ ಸರಕಾರದ ನೇತೃತ್ವದಲ್ಲಿ ಮತ್ತು ಸಂರಕ್ಷಣಾ (Care-Taker) ಸರಕಾರದ ನೇತೃತ್ವದಲ್ಲಿ ಚುನಾವಣೆ ನಡೆಸಬೇಕೆಂಬ ಕುತಂತ್ರ ಸಹವಿಫಲವಾಗಿದೆ. ಒಂದಲ್ಲಾ ಒಂದು ರೀತಿಯ ನೆಪವೊಡ್ಡಿ ಅನಿರ್ಧಿಷ್ಟ ಕಾಲದ ವರೆಗೂ ಚುನಾವಣೆಯನ್ನು ಮುಂದೂಡಬೇಕೆಂದು ಅವರು ಮಾಡಿದ ಪ್ರಯತ್ನ ಸಹ ಕೈಗೂಡಿಲ್ಲ. ಚುನಾವಣಾ ಕಮೀಷನರ್ ಅವರು, ಚುನಾವಣೆಗಳನ್ನು ನಡೆಸಬೇಕೆಂದು ತೀರ್ಮಾನ ಕೈಗೊಂಡಿದ್ದರಿಂದ ಕಾಂಗ್ರೆಸ ಎಲ್ಲಾ ಕುತಂತ್ರಗಳು ಹುಸಿಯಾಗಿವೆ.

ಪ. ಬಂಗಾಲದಲ್ಲಿ ಎಡರಂಗದ ಅಧಿಕಾರವಧಿ ಮುಗಿಯುವ ವರೆಗೆ ಚುನಾವಣೆ ನಡೆಯಬಾರದೆಂದು ಕಾಂಗ್ರೆ ಘೋಷಿಸುತ್ತಿತ್ತು. ಅದೇ ಸಮಯದಲ್ಲಿ ಹರ್‍ಯಾಣಾ ಮತ್ತು ಹಿಮಾಚಲ ಪ್ರದೇಶಗಳಲ್ಲಿ ಅಧಿಕಾರವಧಿ ಮುಗಿಯುವ ಮೊದಲೇ ಚುನಾವಣೆ ನಡೆಸಲಪೇಕ್ಷಿಸುತ್ತಿತ್ತು. ಈ ಪ್ರಯತ್ನಗಳಲ್ಲಿ, ಪರಾಭವಗೊಂಡಿರುವ ಕಾಂಗ್ರೆಯನ್ನು ಈ ಚುನಾವಣೆಗಳಲ್ಲಿ ಮಣ್ಣು ಮುಕ್ಕಿಸುವದು ಎಲ್ಲಾ ಎಡ ಮತ್ತು ಪ್ರಜಾಪ್ರಭುತ್ವ ಪಕ್ಷಗಳ ಆದ್ಯ ಕರ್ತವ್ಯವಾಗಿದೆ.

ಇಡೀ ದೇಶದಲ್ಲೇ ಸರ್ವಾಧಿಕಾರಿ ಶಕ್ತಿಗಳಿಗೆ ಪ್ರಬಲ ಪ್ರತಿರೋಧವನ್ನು ಒಡ್ಡಿ ಪರಾಭವಗೊಳಿಸಿದ ರಾಜ್ಯಗಳೆಂದರೆ ಪ. ಬಂಗಾಳ, ತ್ರಿಪುರ, ಕೇರಳ ರಾಜ್ಯಗಳು. ಪ. ಬಂಗಾಳದ ಎಡರಂಗ ಸರಕಾರ ತನ್ನ ಅಧಿಕಾರವಧಿಯನ್ನು ಪೂರ್ತಿಗೊಳಿಸಲಿದೆ. ತ್ರಿಪುರಾ ಸರಕಾರ 4 ವರ್ಷ ಅವಧಿ ಪೂರೈಸಿದೆ. ಕೇರಳದಲ್ಲಿ ಕಾಂ॥ ನಯಾನಾರ್ ನೇತ್ರತ್ವದ ಸರಕಾರ 21 ತಿಂಗಳ ಆಡಳಿತ ನಡೆಸಿ ರಂಗದ ಪಾಲುದಾರ ಎ. ಕೆ. ಅಂತೋಣಿ ಬಳಗದವರ ವಿಶ್ವಾಸ ದ್ರೋಹದಿಂದಾಗಿ ಬಹುಮತಕಳೆದುಕೊಂಡಿತ್ತು.

ಈ ಸರಕಾರಗಳು ಜನತೆಯ ಪ್ರಜಾಪ್ರಭುತ್ವ ಹಕ್ಕುಗಳನ್ನು ಸಂರಕ್ಷಣೆ ಮಾಡಿದ್ದೇ ಅಲ್ಲದೆ ಸ್ಥಾನ ಬದ್ಧತಾ ಕಾಯ್ದೆಯನ್ನು ಜಾರೀ ಮಾಡುವದನ್ನು ನಿರಾಕರಿಸಿದ್ದವು. ಜನಪರವಾದ ನೀತಿಗಳನ್ನು ಅನುಸರಿಸಿ, ಸೀಮಿತ ಅಧಿಕಾರದಲ್ಲೇ ಅತ್ಯುತ್ತಮ ಕಾರ್ಯನಿರ್ವಹಿಸಿ ಭೂಮಾಲಿಕ ಬಂಡವಾಳಶಾಹಿಗಳ ಪಕ್ಷಗಳಿಗೆಪ್ರಬಲ ಪರ್ಯಾಯವಾಗಿರುವುದನ್ನು ಸಾಬೀತು ಮಾಡಿವೆ. ಕಾರಣ ಸರ್ವಾಧಿಕಾರಿ ಕಾಂಗ್ರೆಯನ್ನು ಸೋಲಿಸಿ ಮತ್ತೆ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಅಧಿಕಾರಕ್ಕೆ ಬರಬೇಕೆಂದು ನಾವು ಆಶಿಸುತ್ತೇವೆ.

ಹಿಂದೆ ಸರ್ವಾಧಿಕಾರಿ ಶಕ್ತಿಗಳ ವಿರುದ್ಧ ಕೆಲವು ಹಂತಗಳಲ್ಲಿ ಹೋರಾಟ ನಡಿಸಿದ ಕೆಲವು ರಾಜಕೀಯ ಪಕ್ಷಗಳು

(8 ನೇ ಪುಟ ನೋಡಿ)

ಪಶ್ಚಿಮ ಬಂಗಾಳದಲ್ಲಿ ಕಾಂಗ್ರೆಸ್ (ಐ)ಯನ್ನು ಮಣ್ಣು ಮುಕ್ಕಿಸಿ

—ಪಾಲಿಟ್‌ಬ್ಯೂರೋ

ಮೇ ತಿಂಗಳ ಚುನಾವಣೆಯಲ್ಲಿ ಪಶ್ಚಿಮ ಬಂಗಾಳದ ಜನತೆ ಸಿ. ಪಿ. ಐ. (ಎಂ) ನೇತೃತ್ವದ ಎಡರಂಗಕ್ಕೆ ಭಾರೀ ಮತ ನೀಡಿ ಕಾಂಗ್ರೆಸ್ (ಐ) ಹಾಗೂ ಅದರ ಸಮಯಸಾಧಕ ಮಿತ್ರರನ್ನು ಮಣ್ಣು ಮುಕ್ಕಿಸುವುದೆಂಬ ಬಗ್ಗೆ ಮಾರ್ಕ್ಸ್‌ವಾದಿ ಕಮ್ಯೂನಿಸ್ಟ್ ಪಕ್ಷದ ಪಾಲಿಟ್ ಬ್ಯೂರೋ ಭರವಸೆ ವ್ಯಕ್ತಪಡಿಸಿದೆ.

ಚುನಾವಣೆ ನಡೆಯುತ್ತಿರುವುದೆ ಕಾಂಗ್ರೆಸ್ (ಐ) ಗೆ ಒಂದು ದೊಡ್ಡ ಸೋಲು. ಜನತೆಯ ವಿಶ್ವಾಸ ಕಳೆದುಕೊಂಡ ಕಾಂಗ್ರೆಸ್ (ಐ) ಮತದಾರ ಪಟ್ಟಿಯ ಲೋಪದೋಷದ ನೆವವೊಡ್ಡಿ ಚುನಾವಣೆ ಪ್ರಕ್ರಿಯೆಯನ್ನು ಬುಡಮೇಲು ಮಾಡಲು ಪ್ರಯತ್ನಿಸಿತು, ಕಾಂಗ್ರೆ ಸರ್ವೋಚ್ಚ ನ್ಯಾಯಾಲಯದ ಅದರ ವಾದವನ್ನು ತಳ್ಳಿಹಾಕುತ್ತಾ ಇಂತಹ ವಾದಗಳನ್ನೊಪ್ಪಿಕೊಂಡರೆ ಸಂಪೂರ್ಣ ಚುನಾವಣಾ ಪ್ರಕ್ರಿಯೆಯನ್ನೇ ಅಪಾಯಕ್ಕೀಡುಮಾಡಿದಂತೆ ಎಂದು ಅಭಿಪ್ರಾಯ ಪಟ್ಟಿತು.

ಕೇಂದ್ರದಲ್ಲಿ ಇಂದಿರಾ ಗಾಂಧಿ ಅಧಿಕಾರಕ್ಕೆ ಮರಳಿ ಬಂದಂದಿನಿಂದ ಪಶ್ಚಿಮ ಬಂಗಾಳದಲ್ಲಿ ಕೇಂದ್ರ ಸರ್ಕಾರ ಮಧ್ಯಪ್ರವೇಶಿಸುವಂತಹ ಪರಿಸ್ಥಿತಿ ನಿರ್ಮಿಸಲು ಕಾಂಗ್ರೆಸ್ (ಐ) ಶತ ಪ್ರಯತ್ನ ನಡೆಸಿತು. ಸುಳ್ಳು ಆರೋಪ, ಮತಾಂತಿಕ ಹಲ್ಲೆ, ಉದ್ರೇಕಕಾರೀ ಹಿಂಸಾಚಾರ ಯಾವುದಕ್ಕೂ ಅದು ಹೇಸಲಿಲ್ಲ. ಅಮಾಯಕ ಜನತೆಯನ್ನು ಬಲಿ ತೆಗೆದುಕೊಂಡ ಏಪ್ರಿಲ್ 1981 ರ ಅದರ ಬಂದ್‌ನ ಘಟನೆಗಳನ್ನು ಜನತೆ ಎಂದೂ ಮರೆಯರು. ಇಂತಹದೊಂದು ಪಕ್ಷ ಜನತೆಯ ಸಮ್ಮತಿಯಿಂದ ಅಧಿಕಾರಕ್ಕೆ ಬರಲು ಅವಕಾಶವಾಗಬಹುದು ಎಂದು ಯೋಚಿಸುವುದೂ ಅಸಾಧ್ಯ. ನಮ್ಮ ದೇಶದ ಜನತೆಯನ್ನು ಕಷ್ಟಕಾರ್ಪಣ್ಯಗಳಲ್ಲಿ ಸಿಲುಕಿಸಿ, ತಾನು ಭ್ರಷ್ಟಾಚಾರದಲ್ಲಿ ಮುಳುಗಿ ದೇಶದ ಭವಿಷ್ಯವನ್ನು ಐ. ಎಂ. ಎಫ್. ಗೆ ಒತ್ತೆಯಿಟ್ಟಿರುವ ಪಕ್ಷವನ್ನು ರಾಜ್ಯದ ಜನತೆ ಪರಾಭವಗೊಳಿಸಬೇಕು.

ರಾಜ್ಯದ ಒಳಗೆ ಹಾಗೂ ಹೊರಗೆ ಪ್ರಜಾಪ್ರಭುತ್ವವಾದೀ ಶಕ್ತಿಗಳು ಹಾಗೂ ವಿರೋಧ ಪಕ್ಷಗಳ ಬೆಂಬಲದೊಂದಿಗೆ ಪಶ್ಚಿಮ ಬಂಗಾಳದ ಜನತೆ ತನ್ನ ಮೇಲೆ ರಾಷ್ಟ್ರಪತಿ ಆಡಳಿತ ಹೇರದಂತೆ ನೋಡಿಕೊಂಡು ಸರ್ವಾಧಿಕಾರೀ ಶಕ್ತಿಗಳಿಗೆ ತಕ್ಕ ಬುದ್ಧಿ ಕಲಿಸಿದ್ದಾರೆ. ಈ ಚುನಾವಣೆಗಳಲ್ಲೂ ಅವರು ಭಾರತದ ಹೋರಾಡುತ್ತಿರುವ ಜನತೆಯ ಪರವಾಗಿ ಕಾಂಗ್ರೆಸ್ (ಐ) ಗೆ ಸರಿಯಾದ ಉತ್ತರ ನೀಡಬೇಕು.

ಕಳೆದ ಐದು ವರ್ಷಗಳಲ್ಲಿ ಎಡರಂಗ ಸರ್ಕಾರದ ಕಾರ್ಯಚಟುವಟಿಕೆ ಅತ್ಯುತ್ತಮವಾದದ್ದು. ಸೀಮಿತ ಸಂಪನ್ಮೂಲಗಳು ಹಾಗೂ ಸೀಮಿತ ಅಧಿಕಾರದ ಚೌಕಟ್ಟಿನೊಳಗೇ ತಾನು ಕೊಟ್ಟ ಭರವಸೆಗಳನ್ನು ಅದು ಈಡೇರಿಸಿದೆ. ಈ ದಿಕ್ಕಿನಲ್ಲಿ ಅದು ಕೇಂದ್ರದ ಕಾಂಗ್ರೆಸ್ (ಐ) ಸರ್ಕಾರದೊಂದಿಗೆ ಪ್ರತೀ ಹಂತದಲ್ಲೂ ಕಾದಾಡಬೇಕಾಯಿತು. ತನ್ನ ಇಪ್ಪತ್ತಂಶಗಳ ಮೂಲಕ ರೈತಾಪಿ ವರ್ಗದ ಬಗ್ಗೆ ಕಿರುಚಾಡುವ ಕಾಂಗ್ರೆಸ್ [ಐ] ನ ಕೇಂದ್ರ ಸರಕಾರ ಪಶ್ಚಿಮ ಬಂಗಾಳದ ಭೂಸುಧಾರಣಾ ಕಾನೂನಿನ ಲೋಪದೋಷಗಳನ್ನು ಪರಿಹರಿಸುವ ಮಸೂದೆಗೆ ಒಂದು ವರ್ಷವಾದರೂ ಇದುವರೆಗೂ ಒಪ್ಪಿಗೆ ನೀಡಿಲ್ಲ! ಕಾರ್ಮಿಕ ಸಂಘಗಳ ಮಾನ್ಯತೆ ಬಗ್ಗೆ ಮಸೂದೆಯೊಂದು 1969 ರಿಂದ ಧೂಳು ತುಂಬಿಕೊಂಡು ಕೂತಿದೆ. ಆದ್ದರಿಂದಲೇ ರಾಜ್ಯಗಳಿಗೆ ಹೆಚ್ಚು ಸ್ವಾಯತ್ತತೆ ನೀಡಬೇಕೆಂದು ಎಡರಂಗ ಮಂತ್ರಿಮಂಡಲ ಕೇಳುತ್ತಾ ಬಂದಿದೆ. NSA, ESMA ಇತ್ಯಾದಿ ಶಾಸನಗಳನ್ನು ಎಡರಂಗ ಸರ್ಕಾರ ಖಂಡಿಸಿದೆ. ಲೋಕೋ ಕಾರ್ಮಿಕರ ವಿರುದ್ಧ ಅದನ್ನು ಪ್ರಯೋಗಿಸಲು ನಿರಾಕರಿಸಿದೆ.

ಕೋಮು ಘರ್ಷಣೆ ಹಾಗೂ ಹರಿಜನರ ಮೇಲಿನ ಅತ್ಯಾಚಾರಕ್ಕೆ ಅವಕಾಶವೇ ಇಲ್ಲದಂತೆ ಮಾಡಿರುವುದು ಎಡರಂಗ ಸರ್ಕಾರದ ಒಂದು ಮಹತ್ಸಾಧನೆ. ಕಾಂಗ್ರೆಸ್ [ಐ] ಆಳ್ವಿಕೆಯ ರಾಜ್ಯಗಳಲ್ಲಿ ಪರಿಸ್ಥಿತಿ ತದ್ವಿರುದ್ಧ. ಪಕ್ಕದ ರಾಜ್ಯವಾದ ಬಿಹಾರಿನಲ್ಲಿ ಹರಿಜನರ ಮೇಲೆ ಅತ್ಯಾಚಾರ ನಡೆಸಿದ ಭೂಮಾಲಿಕರು ಇನ್ನೂ ತಿರುಗಾಡಲು ಅವಕಾಶವಿದೆ. ಉರ್ದು ಹಾಗೂ ನೇಪಾಳೀ ಭಾಷಾ ಅಭಿವೃದ್ಧಿಗೂ ಕ್ರಮ ಕೈಗೊಳ್ಳಲಾಗಿದೆ.

ಸಿ. ಪಿ. ಐ. [ಎಂ] ಹಾಗೂ ಅದರ ಎಡ ಪಕ್ಷೀಯ ಮಿತ್ರರಲ್ಲಿ ಸಂಪೂರ್ಣ ಭರವಸೆ ವ್ಯಕ್ತಪಡಿಸಿ ಪ್ರಜಾಪ್ರಭುತ್ವವಾದೀ ಶಕ್ತಿಗಳಿಗೆ ಇನ್ನೊಂದು ಭಾರೀ ವಿಜಯ ಗಳಿಸಿಕೊಡಬೇಕೆಂದು, ಜನ ಅಧ್ಯಕ್ಷೀಯ ಮಾದರಿ ಸರ್ಕಾರ, ನ್ಯಾಯಾಂಗವನ್ನು ಕಾರ್ಯಾಂಗದ ಅಡಿಯಾಳಾಸುವುದು, ಮೂಲಭೂತ ಹಕ್ಕುಗಳ ರದ್ಧತಿ ಇತ್ಯಾದಿ ನಡೆಸುವ ಕಾಂಗ್ರೆಸ್ [ಐ] ಪಕ್ಷದ ಯತ್ನಗಳಿಗೆ ತಡೆ ಹಾಕಬೇಕೆಂದು, ಅವರಿಗೆ ಸಹಾಯ ಮಾಡುವವರಿಗೂ ಬುದ್ಧಿ ಕಲಿಸಬೇಕೆಂದು ಪಾಲಿಟ್ ಬ್ಯೂರೋ ಪಶ್ಚಿಮ ಬಂಗಾಳದ ಜನತೆಗೆ ಕರೆ ನೀಡುತ್ತದೆ. ಮುಂಬರುವ ಚುನಾವಣೆಗಳಲ್ಲಿ ಅವರು ತಮ್ಮ ಚಾರಿತ್ರಿಕ ಕರ್ತವ್ಯವನ್ನು ನೆರವೇರಿಸಲಿ.

ಸಿ. ಪಿ. ಸಿ. ಕಂಪೆನಿ ನೌಕರರ ಮುಷ್ಕರ

ದಕ್ಷಿಣ ಕನ್ನಡ ಪ್ರಮುಖ ಸಾರಿಗೆ ಕಂಪನಿಯಾದ ಸಿ. ಪಿ. ಸಿ. ಕಂಪನಿಯ ನೌಕರರು ಕಳೆದ ತಾರೀಕು 19-3-82 ರಿಂದ ಮುಷ್ಕರ ನಡೆಸುತ್ತಾ ಇದ್ದಾರೆ. ಜಿಲ್ಲೆಯ ಇತರ ಸಾರಿಗೆಯ ಮೇನೇಜುಮೆಂಟ್ ತಾ|| 1-10-81 ರ ಒಪ್ಪಂದದಂತೆ ತಾತ್ಕಾಲಿಕವಾಗಿ ರೂ 80/-ನ್ನು ವೇತನದಲ್ಲಿ ಮತ್ತು ಭತ್ತೆ ದಿನಕ್ಕೆ ರೂ. 15/- ಕೊಡಲು ಒಪ್ಪಿ ತಾ|| 1-9-81 ರಿಂದ ಇದನ್ನು ಜಾರಿ ಮಾಡಿದ್ದಾರೆ. ಆದರೆ ಸಿ.ಪಿ.ಸಿ. ಕಂಪೆನಿಯ ಮೇನೇಜುಮೆಂಟು ಕೊಡಲು ನಿರಾಕರಿಸಿತು ಮಾತ್ರವಲ್ಲ ಮಾತುಕತೆಗೂ ತಯಾರಿಲ್ಲದ್ದರಿಂದ ಈ ಕೇಳಿಕೆಯನ್ನು ಪಡೆಯುವರೆಗೆ ತಾ| 19-3-1982 ರಿಂದ ಸುಮಾರು 280 ನೌಕರರು ಮುಷ್ಕರಕ್ಕೆ ಇಳಿದಿದ್ದಾರೆ. ಜಿಲ್ಲೆಯ ಅತೀ ಹಳೆಯ ಕಂಪನಿಯಾದ ಈ ಕಂಪನಿಯಲ್ಲಿ ವೇತನವು ಬಹಳ ಕಡಿಮೆ.

ತಾ|| 15-4-1982 ರಂದು ಮಂಗಳೂರಿನ ಎಲ್ಲಾ ಬಸ್ಸು ನೌಕರರು ಮಧ್ಯಾಹ್ನ 2 ಗಂಟೆಯಿಂದ 4 ಗಂಟೆಯವರೆಗೆ ಸಾಂಕೇತಿಕ ಮುಷ್ಕರ ಹೂಡಿ ಜಿಲ್ಲಾಧಿಕಾರಿಯವರಿಗೆ ಮನವಿಯೊಂದನ್ನು ಅರ್ಪಿಸಿದರು. ಮನವಿಯಲ್ಲಿ ಸಿ.ಪಿ.ಸಿ. ನೌಕರರ ವಿವಾದವನ್ನ ಇತ್ಯರ್ಥ ಮಾಡಲು ಅಧಿಕಾರಿಯವರು ಮಧ್ಯ ಪ್ರವೇಶ ಮಾಡಬೇಕೆಂದು ವಿನಂತಿಸಲಾಗಿದೆ.

ಮೇನೇಜುಮೆಂಟಿನ ಹಟಮಾರಿತನದಿಂದ ನೌಕರರು ಹೋರಾಟಕ್ಕೆ ಇಳಿಯಬೇಕಾಯಿತು. ಈ ಹೋರಾಟವನ್ನು ಯಶಸ್ವಿಗೊಳಿಸಲು ಎಲ್ಲಾ ಸಂಘಟಿತ ಮಜೂರರು ಸಹಾಯ ಸಹಕಾರ ನೀಡಬೇಕೆಂದು ಮೋಟಾರ್ ಟ್ರಾನ್ಸ್‌ಪೋರ್ಟ್ ಮತ್ತು ಎಂಜೀನೀಯರಿಂಗ್ ವರ್ಕರ್ಸ್ ಯೂನಿಯನ್ನಿನ ಪ್ರಧಾನ ಕಾರ್ಯದರ್ಶಿ ಕೆ. ಮೂಸಬ್ಬ ವಿನಂತಿಸಿಕೊಂಡಿದ್ದಾರೆ.

ಮೈ ಸೂ ರು :

ವಿಕ್ರಾಂತ್ ಟೈರ್ಸ್, ಕಾರ್ಮಿಕರ ಸರ್ವಸದಸ್ಯರ ಸಭೆ

ಮೈಸೂರಿನ ವಿಕ್ರಾಂತ್ ಟೈರ್ಸ್ ಎಂಪ್ಲಾಯಿಸ್ ಯೂನಿಯನ್ನಿನ ಸರ್ವ ಸದಸ್ಯರ ಸಭೆಯು 15-4-82 ರಂದು ಮೈಸೂರಿನ ಟೌನ್‌ಹಾಲಿನಲ್ಲಿ ಯಶಸ್ವಿಯಾಗಿ ನಡೆಯಿತು.

ರಾಜ್ಯ ಸಿ.ಐ.ಟಿ.ಯು. ಅಧ್ಯಕ್ಷರಾದ ಕಾಂ|| ಸೂರ್ಯನಾರಾಯಣ ರಾವ್ ಅವರು ಸಭೆಯಲ್ಲಿ ಹಾಜರಿದ್ದರು [ಕಾಂ| ಸೂರಿಯವರು ಸಾವಿರಕ್ಕೂ ಮಿಕ್ಕಿ ಕಾರ್ಮಿಕರಿರುವ ವಿಕ್ರಾಂತ್ ಟೈರ್ ಕಾರ್ಖಾನೆಯ ಎಲ್ಲಾ ಕಾರ್ಮಿಕರ ಸದಸ್ಯತ್ವವನ್ನು ಪಡೆದಿರುವ ವಿಕ್ರಾಂತ್ ಟೈರ್ ಎಂಪ್ಲಾಯಿಸ್ ಯೂನಿಯನ್ನಿನ ಕಾನೂನು ಸಲಹೆಗಾರರಾಗಿರುತ್ತಾರೆ.]

ದೀರ್ಘಕಾಲದ ಮಾತುಕತೆಗಳ ನಂತರ ವಿಕ್ರಾಂತ್ ಟೈರ್ಸ್ ಮೇನೇಜ್‌ಮೆಂಟ್ ಮತ್ತು ಕಾರ್ಮಿಕ ಸಂಘದ ನಡುವೆ ವೇತನ ಹೆಚ್ಚಳದ ಬಗ್ಗೆ ಒಪ್ಪಂದಕ್ಕೆ ಸಹಿ ಹಾಕಲಾಗುವುದು. ಒಪ್ಪಂದದ ಬಗ್ಗೆ ವಿವರಣೆ ನೀಡಿ ಸರ್ವ ಕಾರ್ಮಿಕರ ಒಪ್ಪಿಗೆ ಪಡೆಯಲು ಕರೆಯಲಾಗಿದ್ದ ಸರ್ವಸದಸ್ಯರ ಸಭೆಯಲ್ಲಿ ಕಾರ್ಮಿಕರು ಕಿಕ್ಕಿರಿದು ಸೇರಿದ್ದು ವೇತನ ಹೆಚ್ಚಳದ ಒಪ್ಪಂದಕ್ಕೆ ದೀರ್ಘಕರತಾಡನ ಹಾಗು ಹರ್ಷೋದ್ಗಾರಗಳ ನಡುವೆ ಕಾರ್ಮಿಕರು ಅನುಮತಿ ಸೂಚಿಸಿದರು. ಈ ಒಪ್ಪಂದದ ಪ್ರಕಾರ ಪ್ರತೀ ಕಾರ್ಮಿಕರಿಗೆ ಕನಿಷ್ಟ ರೂ.200 ರಿಂದ ಗರಿಷ್ಟ ರೂ.320ರವರೆಗೆ ಹೆಚ್ಚಿಗೆ ವೇತನ ಸಿಗಲಿದ್ದು ಮೈಸೂರಿನಕಾರ್ಮಿಕ ಚರಿತ್ರೆಯಲ್ಲೇ ಇದು ಹೊಸ ದಾಖಲೆಯಾಗಿದೆ. ಇಷ್ಟು ವೇತನ ಹೆಚ್ಚಳವನ್ನು ಇದುವರೆಗೆ ಇಲ್ಲಿನ ಯಾವುದೇ ಕಾರ್ಮಿಕ ಸಂಘಟನೆ ಪಡೆದಿಲ್ಲ. ವೇತನ ಹೆಚ್ಚಳದಿಂದ ಸಂತಸಗೊಂಡ ಕಾರ್ಮಿಕರು ತಮ್ಮ ಸಂಘಟನೆಯ ನಿಧಿಗೆ ತಲಾ ರೂ. 100/- ಸಹಾಯಧನ ನೀಡುವುದಾಗಿ ಘೋಷಿಸಿದರು.

ವೇತನ ಹೆಚ್ಚಳದೊಂದಿಗೆ ಕಾರ್ಮಿಕರು ಇತರ ಹಲವಾರು ಬೇಡಿಕೆಗಳನ್ನು ಪಡೆದಿರುತ್ತಾರೆ.

ಸಭೆಯನ್ನುದ್ದೇಶಿಸಿ ಮಾತನಾಡಿದ ಕಾಂ|| ಸೂರಿಯವರು ಸಂಘಟನೆಯ ಮೂಲಕ ಬೇಡಿಕೆ ಈಡೇರಿಸಿಕೊಂಡ ಕಾರ್ಮಿಕರನ್ನು ಅಭಿನಂದಿಸಿದರು. "ವಿಕ್ರಾಂತ್ ಕಾರ್ಮಿಕರು ರಾಜಕೀಯವಾಗಿ ಪ್ರಜ್ಞಾವಂತರಾಗಿ ಇಡೀ ಮೈಸೂರಿಗೆ ಮುಖಂಡತ್ವ ನೀಡುವತ್ತ ಬೆಳೆದು ಬರಬೇಕು. ದೇಶದಲ್ಲಿ ಕಾಂಗ್ರೆಸ್‌ನ ದಿವಾಳಿಕೋರ ಆರ್ಥಿಕ ನೀತಿಯಿಂದಾಗಿ ಉಂಟಾಗಿರುವ ಭೀಕರ ಸಮಸ್ಯೆಗಳು ಇಲ್ಲವಾಗಿ ಸುಖೀ ರಾಷ್ಟ್ರ ಕಟ್ಟಬೇಕಾದರೆ ಕಾರ್ಮಿಕರ ಸರಕಾರ ಅಧಿಕಾರಕ್ಕೆ ಬರಬೇಕು. ಈ ನಿಟ್ಟಿನಲ್ಲಿ ವಿಕ್ರಾಂತ್ ಕಾರ್ಮಿಕರು ಕೆಂಬಾವುಟ ಹಿಡಿದು ಹೋರಾಟಕ್ಕೆ ಮುಂದಾಗಬೇಕೆಂದು" ಕರೆ ನೀಡಿದರು.

ಆರಂಭದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿಗಳಾದ ಕಾಂ|| ರಾಜೇಂದ್ರ ಸ್ವಾಗತಿಸಿದರು. ಸಂಘದ ಅಧ್ಯಕ್ಷರಾದ ಕಾಂ|| ಬೆಲವೇಂದ್ರರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು. ಕೊನೆಗೆ ಸಂಘದ ಉಪಾಧ್ಯಕ್ಷರಾದ ಕಾಂ|| ಕೃಷ್ಣರವರು ಧನ್ಯವಾದ ಸಲ್ಲಿಸಿದರು.

ಸಿ.ಐ.ಟಿ ಯು ಮುಖಂಡನ ಮೇಲೆ ಪೋಲಿಸ್ ದೌರ್ಜನ್ಯ

ಸಿ.ಐ ಟಿ.ಯು. ರಾಜ್ಯ ಸಮಿತಿ ಸದಸ್ಯರಾದ ಹಾಗೂ ಮೈಸೂರು ಜಿಲ್ಲಾ ಸಿ.ಐ.ಟಿ.ಯು. ಸಂಚಾಲಕರಾದ ಕಾಂ|| ಮೋಹನ್ ಕುಮಾರ್ ರವರ ಮೇಲೆ ಪೋಲಿಸರು ಅಮಾನುಷವಾಗಿ ಥಳಿಸಿ ದೌರ್ಜನ್ಯವೆಸಗಿದ್ದು ಇಲ್ಲಿನ ಕಾರ್ಮಿಕರಲ್ಲಿ ಆತಂಕವನ್ನುಂಟು ಮಾಡಿದೆ.

12-4-82 ರಂದು ರಾತ್ರಿ ಹೋಟೆಲ್ ಕಾರ್ಮಿಕರ ಸಭೆ ಮುಗಿಸಿ ಏಕಾಂಗಿಯಾಗಿ ತಮ್ಮ ರೂಮಿನತ್ತ ಹೋಗುತ್ತಿದ್ದ ಕಾಂ|| ಮೋಹನ್ ಕುಮಾರ್‌ರವರನ್ನು ಪಾನಮತ್ತರಾಗಿ ಹೋಗುತ್ತಿದ್ದ ಮೂವರು ಪೋಲಿಸ್ ಸಬ್ ಇನ್ಸ್‌ಪೆಕ್ಟರುಗಳು ತಡೆದು ನಿಲ್ಲಿಸಿ ಅಸಂಬದ್ಧ ಪ್ರಶ್ನೆಗಳನ್ನು ಕೇಳಲಾರಂಭಿಸಿದರು. ಕಾಂ|| ಮೋಹನ್ ನೇರ ಉತ್ತರ ನೀಡಿದಾಗ ಸಿಟ್ಟಿಗೆದ್ದ ಪೋಲಿಸ್ ಅಧಿಕಾರಿಗಳು ರಸ್ತೆಯಲ್ಲೇ ಅವರಿಗೆ ಥಳಿಸಲಾರಂಭಿಸಿದರು. ಘಟನೆ ಕಂಡು ಸ್ಥಳದಲ್ಲಿ ರಿಕ್ಷಾ ಚಾಲಕರು ಸುತ್ತುವರಿದರು. ಸಿವಿಲ್ ಉಡುಪಿನಲ್ಲಿದ್ದ ಪೋಲಿಸ್ ಅಧಿಕಾರಿಗಳು ಜನ ನೆರೆದದ್ದನ್ನು ಕಂಡು ಕಾಂ| ಮೋಹನ್ ಕುಮಾರ್‌ರವರನ್ನು ಹತ್ತಿರದ ಪೋಲಿಸ್ ಠಾಣೆಗೆ ಎಳೆದೊಯ್ದು ಅಲ್ಲೂ ವಿನಾಕಾರಣ ಅಮಾನುಷವಾಗಿ ಲಾಠಿಯಿಂದ ಥಳಿಸಿದರು. ಕಾಂ| ಮೋಹನ್‌ರ ತುಟಿಗಳಿಂದ ರಕ್ತ ಹೊರಬಂದಿತು. ರಿಸ್ಟ್‌ವಾಚ್ ಚೈನ್ ತುಂಡಾಗಿ ನೆಲಕ್ಕುರುಳಿತು.

ಹಿಂದೆ ಹಲವಾರು ಹೋಟೆಲು ಕಾರ್ಮಿಕರ ಹೋರಾಟಗಳನ್ನು ಸಂಘಟಿಸಿದ್ದ ಸಂದರ್ಭದಲ್ಲಿ ಈ ಪೋಲಿಸ್ ಎಸ್.ಐ. ಗಳು ನಡೆಸಿದ ದೌರ್ಜನ್ಯದ ವಿರುದ್ಧ ನಡೆಸಿದ ಕಾರ್ಮಿಕರ ದಿಟ್ಟ ಹೋರಾಟದಿಂದ ಸಿಟ್ಟಿಗೆದ್ದಿದ್ದ ಎಸ್.ಐ.ಗಳು ಹಳೆಯ ಸೇಡನ್ನು ತೀರಿಸಿಕೊಂಡರು.

(7ನೇ ಪುಟವನ್ನು ನೋಡಿ)

ರಾಜ್ಯ ಬೀಡಿ ಕಾರ್ಮಿಕರ ೪ನೇ ಸಮ್ಮೇಳನದ ನಿಮಿತ್ತ ವಿಶೇಷ ಲೇಖನ

ಬೀಡಿ ಕಾರ್ಮಿಕರ ಸಂಘಟನೆ ಮತ್ತು ಹೋರಾಟ

……..ಕೆ. ಶಂಕರ

ಬೀಡಿ ಕೈಗಾರಿಕೆಯು ದೇಶದ ಹಲವು ರಾಜ್ಯಗಳಲ್ಲಿ ಹರಡಿರುವ ಕೈಗಾರಿಕೆ ಮತ್ತು ಹೇರಳ ಲಾಭ ಗಳಿಸುವ ಕೈಗಾರಿಕೆಯಾಗಿದೆ. ನಮ್ಮ ರಾಜ್ಯದಲ್ಲೇ 5 ಲಕ್ಷಕ್ಕೂ ಮಿಕ್ಕಿ ಬೀಡಿ ಮಜೂರರು ದುಡಿಯುತ್ತಿದ್ದಾರೆ. ಇದರಲ್ಲಿ ದುಡಿಯುವ ಕಾರ್ಮಿಕರ ಸಂಪಾದನೆ ಬಹಳ ಕಡಿಮೆಯಾಗಿದ್ದು, ದಿನ ಒಂದಕ್ಕೆ 10 ಗಂಟೆಯಿಂದ 16 ಗಂಟೆಯವರೆಗೆ ದುಡಿಯಬೇಕಾದ ಪರಿಸ್ಥಿತಿ ಇದೆ. ಇದರಲ್ಲಿ ಕಂಟ್ರಾಕ್ಟ್ ಪದ್ಧತಿಯಿಂದ ಮಜೂರರ ಪೈಪೋಟಿಯು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ. ರಾಜ್ಯದಲ್ಲಿ 5 ಲಕ್ಷಕ್ಕೂ ಮಿಕ್ಕಿ ಬೀಡಿ ಕಾರ್ಮಿಕರು ಇದ್ದು, ದಕ್ಷಿಣ ಕನ್ನಡ ಜಿಲ್ಲೆಯಲ್ಲೇ ಸುಮಾರು ಎರಡೂವರೆ ಲಕ್ಷ ಬೀಡಿ ಮಜೂರರು ದುಡಿಯುತ್ತಿದ್ದಾರೆ.

ಹಳ್ಳಿ ಮತ್ತು ಪಟ್ಟಣಗಳಲ್ಲಿ ಹರಡಿರುವ ಈ ಕೈಗಾರಿಕೆಯಲ್ಲಿ ಮಜೂರರ ಶೋಷಣೆಯು ವಿಪರೀತವಾಗಿ ನಡೆಯುತ್ತಿದೆ. ಅಧಿಕ ಸಂಖ್ಯೆಯಲ್ಲಿ ಸ್ತ್ರೀ ಮಜೂರರೇ ದುಡಿಯುವ ಈ ಕೈಗಾರಿಕೆಯಲ್ಲಿ ಮಧ್ಯವರ್ತಿ ಕಂಟ್ರಾಕ್ಟುದಾರರಿಂದ ನಡೆಯುವ ಶೋಷಣೆಯನ್ನು ವಿರೋಧಿಸಿ, ಸಂಘಟನಾ ಶಕ್ತಿಯಿಂದ ಏನಾದರೂ ಕಿಂಚಿತ್ತು ಸವಲತ್ತು ದೊರೆತರೆ ಅದರ ಪಾಲನ್ನು ಕಂಟ್ರಾಕ್ಟುದಾರರು ಕೊಳ್ಳೆ ಹೊಡೆಯುತ್ತಿದ್ದಾರೆ. ಈ ಪದ್ಧತಿಯು ನಿಲ್ಲಬೇಕೆಂಬ ಮಜೂರರ ಹೇಳಿಕೆಯು ಸರ್ಕಾರದ ಕಿವಿಗೆ ಇನ್ನೂ ಸರಿಯಾಗಿ ನಾಟಲಿಲ್ಲ.

ರಾಜ್ಯದ ಪ್ರಮುಖ ಬೀಡಿ ತಯಾರಕರು ಇರುವುದು ದ. ಕ. ಜಿಲ್ಲೆಯಲ್ಲಿ. ಮಜೂರರು ಸತತವಾಗಿ ನಡೆಸಿದ ಹೋರಾಟದ ಫಲವಾಗಿ ಸರ್ಕಾರವು ಏನಾದರೂ ಕಾನೂನು ಮಾಡಿದರೂ ದೇಶದ ಸುಪ್ರೀಂ ಕೋರ್ಟಿನವರೆಗೆ ಅವರ ವಿರುದ್ಧ ಹೋಗಿ ಅದನ್ನು ಸಾಧ್ಯವಾದಷ್ಟು ಜ್ಯಾರಿಯಾಗದಂತೆ ಮಾಡುವ ಮಾಲೀಕರು ಇರುವುದು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ.

ಕೇಂದ್ರ ಸರ್ಕಾರವು ಈ ಕೈಗಾರಿಕೆಗೆ ಕಾನೂನು ಒಂದನ್ನು ಜ್ಯಾರಿ ಮಾಡಿ 13 ವರ್ಷ ಕಳೆದರೂ ಇದರ ಸಂಪೂರ್ಣ ಪ್ರಯೋಜನ ಮಜೂರರಿಗೆ ಇನ್ನೂ ಲಭಿಸಿಲ್ಲ. ಈ ಕೈಗಾರಿಕೆಯಲ್ಲಿ ಮಧ್ಯವರ್ತಿಯಾಗಿರುವ ಕಂಟ್ರಾಕ್ಟುದಾರರ ಶೋಷಣೆಯಿಂದ ಮಜೂರರಿಗೆ ರಕ್ಷಣೆ ಕೊಡಲು ಸರ್ಕಾರ ವಿಫಲವಾಗಿದೆ. ಕರ್ನಾಟಕದಲ್ಲಿ, ಅದರಲ್ಲೂ ದಕ್ಷಿಣ ಕನ್ನಡ ಜಿಲ್ಲೆಯ ಬೀಡಿ ಮಜೂರರ ಹೋರಾಟದ ಫಲವಾಗಿ 1974 ರಲ್ಲಿ ಕಾನೂನು ಜ್ಯಾರಿ ಮಾಡಲು ಬೀಡಿ ಮಾಲೀಕರು ಒಪ್ಪಿ, ಬೋನಸ್ ಮತ್ತು ಇತರ ಕೆಲವು ಸವಲತ್ತು ಕೊಡಲು ಮುಂದಾದರು. ಆದರೆ ಈ ಸವಲತ್ತು ಮಜೂರರಿಗೆ ಸರಿಯಾಗಿ ದೊರೆಯುವುದಿಲ್ಲ ಮಾತ್ರವಲ್ಲ ಕಂಟ್ರಾಕ್ಟುದಾರರು ಇದರ ಅಧಿಕ ಲಾಭ ಪಡೆಯುತ್ತಿದ್ದಾರೆ. ಕಾನೂನು ರೀತಿಯ ಸವಲತ್ತು ದೊರಕಿದ ಬೆನ್ನಿನಲ್ಲೇ ಮಜೂರರಿಂದ ಎಲೆ ಮತ್ತು ತಂಬಾಕಿನ ಎವರೇಜನ್ನು ಹೆಚ್ಚಿಸಿ ಕಂಟ್ರಾಕ್ಟುದಾರರು ದಂಡ ವಸೂಲಿ ಮಾಡಲಾರಂಭಿಸಿದರು. ಈ ಎವರೇಜು ಎಷ್ಟು ಎಂದು ನಿರ್ಣಯವಿಲ್ಲ. ಮಜೂರರಿಗೆ ಸಹಾಯ ಮಾಡುವ ಸರ್ಕಾರಕ್ಕೆ ದೂರಿತ್ತರೂ ಕೇಳದ ಪರಿಸ್ಥಿತಿ ಇದೆ. ಸರ್ಕಾರಿ ಅಧಿಕಾರಿಗಳಿಗೆ ತಿಳಿಸಿದರೂ ಈ ವರೆಗೆ ಅದನ್ನು ನಿಲ್ಲಿಸಲು ಮುಂದಾಗಲಿಲ್ಲ. ಮಜೂರರು ಪ್ರತಿಭಟಿಸಿದರೆ ಕಂಟ್ರಾಕ್ಟುದಾರರು ಕಿರುಕುಳ ಕೊಟ್ಟು ಮಜೂರರನ್ನು ಕೆಲಸದಿಂದ ಬಿಟ್ಟು ಹೋಗುವಂತೆ ಮಾಡುವ ಮತ್ತು, ಹಾಜರಿ ಪುಸ್ತಕ ಕೊಡದೇ ದುಡಿಸಿ ಬೋನಸ್ ಇತ್ಯಾದಿಗಳನ್ನು ಸಾವಿರಗಟ್ಟಲೆ ಮೋಸ ಮಾಡುವ ಕಂಟ್ರಾಕ್ಟುದಾರರು ಕೆಲವು ಭಾಗಗಳಲ್ಲಿ ಇದ್ದಾರೆ. ಕೆಲಸದ ಹೆದರಿಕೆ ತೋರಿಸಿ ಕನಿಷ್ಠ ಮಜೂರಿಯನ್ನು ಕೊಡದೇ ಮಜೂರರ ಹೆಬ್ಬೆಟ್ಟು ಯಾ ದಸ್ಕತ್ತು ಪಡೆಯುವ ಕಂಟ್ರಾಕ್ಟುದಾರರು ಹಲವರಿದ್ದಾರೆ.

ಹೆರಿಗೆ ಭತ್ತೆಯನ್ನು ಕಾನೂನು ಪ್ರಕಾರ ಪಾವತಿ ಮಾಡದೇ ವರ್ಷಗಟ್ಟಲೆ ಕೊಡದೇ ಇರುವ ಮಾಲೀಕರ ಬಗ್ಗೆ ಸರ್ಕಾರ ಕಣ್ಣು ಮುಚ್ಚಿ ಕೂತಿದೆ. ಸಂಬಂಧಪಟ್ಟ ಅಧಿಕಾರಿಗಳಿಗೆ ದೂರಿತ್ತರೆ ಯಾವ ಕ್ರಮವನ್ನೂ ತೆಗೆದುಕೊಳ್ಳದೇ ಮಾಲಿಕರಿಗೆ, ಕಂಟ್ರಾಕ್ಟುದಾರರಿಗೆ ಪರವಾಗಿ ವರ್ತಿಸುತ್ತಾರೆ.

ಇಂತಹ ಪರಿಸ್ಥಿತಿಯಿದ್ದರೂ ಸಂಘಟನಾ ಶಕ್ತಿಯನ್ನು ಬೆಳೆಸಿಕೊಂಡು ಬೀಡಿ ಕಾರ್ಮಿಕರು ತಮ್ಮ ಹಕ್ಕುಗಳಿಗಾಗಿ ಇತರ ಕಾರ್ಮಿಕ ವಿಭಾಗಗಳ ಜತೆಗೂಡಿ ಹೋರಾಡಲು ಮುಂದಾದ ಕಾರಣ ಕೆಲವು ಸವಲತ್ತು ಪಡೆಯಲು ಸಾಧ್ಯವಾಯಿತು; ಹಾಗೂ ಕೂಲಿ ಹೆಚ್ಚಿಗೆ ಪಡೆಯಲು ಸಾಧ್ಯವಾಗಿದೆ.

1978 ರಿಂದ ಬೀಡಿ ಮಜೂರರಿಗೆ ಪ್ರಾವಿಡೆಂಟ್ ಫಂಡಿನ ಸವಲತ್ತು ಜಾರಿಯಾಗಿ ಮಜೂರರ ಮಜೂರಿಯಿಂದ ಕಂಟ್ರಾಕ್ಟುದಾರರು ತಮಗೆ ಇಷ್ಟ ಬಂದಂತೆ ವಜಾ ಮಾಡುತ್ತಾ ಇದ್ದಾರೆ. ಈ ತನಕ ಇದರ ಲೆಕ್ಕ ಎಂಬುದು ಬೀಡಿ ಮಜೂರರಿಗೆ ಸಿಕ್ಕಿಲ್ಲ. ಕೆಲವರು ಅದನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಪಾವತಿ ಮಾಡಲಿಲ್ಲ. ಓರ್ವ ಮಜೂರನ/ಳ ಮಜೂರಿಯಿಂದ ಕಡಿತವಾದುದಕ್ಕೆ ಸರಿಯಾದ ಲೆಕ್ಕಪತ್ರ ಕೊಡಬೇಕು. ಹಾಗೂ ಪ್ರತಿ ತಿಂಗಳು ಅಥವಾ ವಾರದಲ್ಲಿ ಮಜೂರಿ ಕೊಡುವಾಗ ವೇಜ್ ಸ್ಲಿಪ್ ಕೊಡಬೇಕು ಎಂದು ಕಾನೂನು ಇದ್ದರೂ ಕೊಡುತ್ತಿಲ್ಲ. ಈ ಬಗ್ಗೆ ಬೀಡಿ ಕಾರ್ಮಿಕರು ಹಲವು ಬಾರಿ ಹೋರಾಟಗಳನ್ನು ನಡೆಸಿದರೂ ಯಾವ ಪರಿಣಾಮವೂ ಆಗಲಿಲ್ಲ. ಇನ್ನು ಸರ್ಕಾರದ ವಿರುದ್ಧ ತೀವ್ರ ಹೋರಾಟ ಮಾಡುವ ಅಗತ್ಯ ಇದೆ.

ಎಲೆ ಕ್ರಯವು ಹೆಚ್ಚಿದೆ ಎಂಬ ನೆಪದಲ್ಲಿ ಇಂದು ಬೀಡಿ ಮಜೂರರಿಂದ ವಸೂಲು ಮಾಡುವ ದಂಡವು ಹೆಚ್ಚಾಗಿದೆ. ಬೀಡಿ ಎಲೆಯ ಕೃತಕ ಅಭಾವ ಮತ್ತು ಬೆಲೆ ಏರಿಕೆಗೆ ಸರ್ಕಾರದ ನೀತಿಯೇ ಕಾರಣವಾಗಿರುವಾಗ ಅದನ್ನು ಪರಿಹಾರ ಮಾಡಲು ಮುಂದಾಗುವುದು ಬಿಟ್ಟು ಬಡ ಕಾರ್ಮಿಕರ ಮೇಲೆ ಅದರ ಭಾರವನ್ನು ತೋರಿಸುವ ಸರ್ಕಾರ ಮತ್ತು ಮಾಲೀಕರ ನೀತಿ ನ್ಯಾಯಬಾಹಿರವಾಗಿದೆ ಮತ್ತು ಅನ್ಯಾಯವಾಗಿದೆ.

ಎಲೆ ಅಭಾವ ನೆಪದಿಂದ ಮೊದಲೇ ಕಡಿಮೆ ಸಂಪಾದನೆಯಿದ್ದ ಮಜೂರರಿಗೆ ವಾರದಲ್ಲಿ ಮೂರು ದಿವಸದ ಕೆಲಸ ಕೊಟ್ಟು ಉಪವಾಸಕ್ಕೆ ದೂಡುವರಿದ್ದಾರೆ.

ಸರ್ಕಾರದ 'ವೆಲ್‌ಫೇರ್ ಸ್ಕೀಂ' ನಿಂದ ಬೀಡಿ ಮಜೂರರಿಗೆ ಸಿಗುವ ಸೌಲಭ್ಯವು ಕನಸಿನ ಗಂಟಾಗಿದೆ. ಬೀಡಿ ಮಜೂರರಿಗೆ 'ಔಷಧ ಸೌಲಭ್ಯ', ಮಕ್ಕಳಿಗೆ 'ಸ್ಕಾಲರ್ ಷಿಪ್' ಹಾಗೂ 'ಮನೆ ಕಟ್ಟಲು ಸಹಾಯ' ಇತ್ಯಾದಿ ಸರಿಯಾಗಿ ಸಿಗುತ್ತಿಲ್ಲ. ಅವುಗಳು ಕಾರ್ಯರೂಪಕ್ಕೆ ಬಾರದೆ ಭರವಸೆಗಳಾಗಿ ಉಳಿದುಕೊಂಡಿವೆ.

ಸರ್ಕಾರವು ಬೀಡಿ ಕಾರ್ಮಿಕರಿಗೆ ಕನಿಷ್ಠ ಕೂಲಿ ನಿರ್ಣಯ ಮಾಡುವಾಗಲೂ ಹಾಗೂ ಜ್ಯಾರಿ ಮಾಡುವಾಗಲೂ ತೀರಾ ಅನ್ಯಾಯ ಮಾಡಿದೆ. ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರಿದ್ದು ಈ ಕೈಗಾರಿಕೆಯಲ್ಲಿ ಕೂಡಲೇ ಸಂಘಟಿತ ಪ್ರತಿಭಟನೆಗೆ ತಯಾರಾಗುವವರಿಲ್ಲ ಎಂಬ ಒಂದೇ ಕಾರಣದಿಂದ ಮಾಲೀಕರು ಮತ್ತು ಸರ್ಕಾರ ಸತತವಾಗಿ ವಂಚಿಸುತ್ತಾ ಬಂದು ಸಂಬಂಧಪಟ್ಟ ಕನಿಷ್ಟ ಕೂಲಿ ಸಮಿತಿಯಲ್ಲಿ ರೂ. 8.10 ಶಿಫಾರಸ್ಸು ಮಾಡಿದ್ದನ್ನು ಕಡಿಮೆ ಮಾಡಿ, ರೂ. 7-40 ನ್ನು ಗೊತ್ತುಮಾಡಿ, ಮಾಲಿಕರ ಹಿತ ಸರಕಾರ ಮಾಡಿದಂತಾಗಿ ಹಾಗೂ ಇದು ತೀರಾ ವಂಚನೆಯಿಂದ ಕೂಡಿದ್ದಾಗಿದೆ. ಅದೂ ಕೂಡ ಸರಿಯಾಗಿ ಬೀಡಿ ಕಾರ್ಮಿಕರ ಕೈಗೆ ಸಿಗದಂತೆ ಆಗಿದೆ. ಕೆಲವು ಸವಲತ್ತನ್ನು ಮಾಲೀಕರು ಹೈಕೋರ್ಟಿಗೆ ಹೋಗಿ ತಡೆಯಾಜ್ಞೆಗಳ ಮೂಲಕ ತಡೆಹಿಡಿಯಲು ಬೇಕಾದ ಅವಕಾಶವನ್ನು ಸರ್ಕಾರವು ಮಾಡಿದೆ. ಅದರ ಸಂಪೂರ್ಣ ಉಪಯೋಗ ಮಾಲೀಕರು ಪಡೆಯಲು ಸಹಾಯಕವಾಗಿದೆ. ಬೀಡಿ ಕಾರ್ಮಿಕರಿಗೆ ಕೆಲಸವಿಲ್ಲದ ಸಂದರ್ಭ ಯಾವ ಪರಿಹಾರವೂ ಇಲ್ಲದಂತಾಗಿದೆ.

ಕಾರ್ಮಿಕರ ವಿರುದ್ಧವಾಗಿ ಸರ್ಕಾರವು ಹಲವಾರು ಕಾಯಿದೆಗಳನ್ನು ತಂದು ಸಂಘಟನೆಯಾಗದಂತೆಯೂ, ಹೆಚ್ಚಿನ ಸವಲತ್ತುಗಳನ್ನು ಪಡೆಯಲು ಸಾಧ್ಯವಿಲ್ಲದಂತೆಯೂ ಮಾಡಿದೆ. ಆದರೆ ಮಾಲೀಕರ ವಿರುದ್ಧ ಯಾವ ಕಾಯಿದೆ ಹಾಗೂ ಸುಗ್ರೀವಾಜ್ಞೆ ತರಲು ಸರ್ಕಾರ ಹಿಂಜರಿಯುತ್ತದೆ. ಇದರರ್ಥ ಮಾಲಿಕರ ಪರ ನೀತಿ ಅನುಸರಿಸುವುದು ಅಂತ ಎದ್ದು ಕಾಣುತ್ತದೆ. ಸರ್ಕಾರದ ಟೊಳ್ಳು ಘೋಷಣೆಯಿಂದ ಬೀಡಿ ಮಜೂರರನ್ನು ವಂಚಿಸುವುದನ್ನು ನಿಲ್ಲಿಸಲು ಸಂಘಟಿತ ಹೋರಾಟ ಅಗತ್ಯ. ಹೆಚ್ಚಿನ ಮಜೂರಿ, ಬೋನಸ್ಸು ಮತ್ತು ಮುಖ್ಯ ಇತರ ಬೇಡಿಕೆಗಳು ಮಾಲಿಕರ ಮತ್ತು ಸರ್ಕಾರದ ಮುಂದೆ ಇದ್ದು, ಇವುಗಳನ್ನು ಪಡೆಯಲು ಬೀಡಿ ಕಾರ್ಮಿಕರು ರಾಜ್ಯಾದ್ಯಂತ ಸಂಘಟನೆಯಾಗಿ, ಸಂಘಟಿತ ಹೋರಾಟ ಮಾಡುವ ಸಿದ್ಧತೆ ನಡೆಸುತ್ತಿರುವುದು ಸ್ವಾಗತಾರ್ಹವಾದುದು.

ಈ ಕರ್ತವ್ಯವನ್ನು ಪೂರೈಸುವ ಉದ್ದೇಶದಿಂದ ಅತ್ಯಂತ ವಿಶಾಲ ರೀತಿಯಲ್ಲಿ ಕರ್ನಾಟಕ ರಾಜ್ಯದ ಬೀಡಿ ಕಾರ್ಮಿಕರನ್ನು ಸಂಘಟಿಸುವ ಸಲುವಾಗಿ 'ಕರ್ನಾಟಕ ರಾಜ್ಯದ ಬೀಡಿ ವರ್ಕರ್ಸ್ ಫೆಡರೇಷನ್' (ಸಿ. ಐ. ಟಿ. ಯು) ನ 4ನೇ ರಾಜ್ಯ ಸಮ್ಮೇಳನವು ದಕ್ಷಿಣ ಕನ್ನಡ ಜಿಲ್ಲೆಯ ಬಂಟ್ವಾಳದಲ್ಲಿ ಏಪ್ರಿಲ್ 24 ಮತ್ತು 25 ರಂದು ನಡೆಯಲಿದೆ. ಮುಖ್ಯವಾಗಿ ದಕ್ಷಿಣ ಕನ್ನಡ ಜಿಲ್ಲೆಯ ಬೀಡಿ ಕಾರ್ಮಿಕರು ಇತರ ಸಂಘಟಿತ ಕಾರ್ಮಿಕ ವಿಭಾಗಗಳ ಸಹಕಾರ ಪಡೆದು ಭಾರಿ ಯಶಸ್ವಿಗೊಳಿಸಲು ಶ್ರಮಿಸುತ್ತಿರುವುದು ಅಭಿನಂದನಾರ್ಹವಾದುದು. ಸಮ್ಮೇಳನವನ್ನು ಯಶಸ್ವಿಗೊಳಿಸುವುದರೊಂದಿಗೆ ಮುಂದಿನ ದಿನಗಳಲ್ಲಿ ಬೀಡಿ ಕಾರ್ಮಿಕರು ಅವರ ಬೇಡಿಕೆಗಳನ್ನು ಇತ್ಯರ್ಥಗೊಳಿಸಲು ತೀವ್ರ ರೀತಿ ಹೋರಾಟಕ್ಕೆ ಸಂಬಂಧಪಟ್ಟ ಕಾರ್ಯಕ್ರಮವನ್ನು ರೂಪಿಸುವಂತಾಗಲಿ ಎಂದು ಹಾರೈಸೋಣ. ●

ಸುಳ್ಯಪದವಿನಲ್ಲಿ :

ರೈತ-ಕೃಷಿ ಕಾರ್ಮಿಕರ ಬಹಿರಂಗ ಸಭೆ

11-4-82 ರಂದು ಪುತ್ತೂರು ತಾಲೂಕಿನ ಪಡವನ್ನೂರು ಗ್ರಾಮದ ಸುಳ್ಯಪದವು ಎಂಬಲ್ಲಿ ಬಹಿರಂಗಸಭೆ ಜರುಗಿತು. ಅಧ್ಯಕ್ಷತೆಯನ್ನು ರೈತ ಸಂಘದ ಕಾಂ|| ನಾರಾಯಣ ಬಂಗೇರ ವಹಿಸಿದ್ದರು. ಆರಂಭದಲ್ಲಿ ಕಾಂ|| ಕೃಷ್ಣ ಸ್ವಾಗತಿಸಿದರು.

ಸಭೆಯನ್ನುದ್ದೇಶಿಸಿ ಸಿ ಪಿ ಐ (ಎಂ) ನ ಪೆರ್ಲ ಘಟಕದ ಕಾರ್ಯದರ್ಶಿ ಕಾಂ| ಪಿ. ಮದನ್ ಮಾಸ್ತರ, ಜಿಲ್ಲಾ ರೈತ ಸಂಘದ ಕಾರ್ಯದರ್ಶಿ ಕಾಂ| ಯು. ಜನಾರ್ಧನ ನಾಯಕ್ ಅವರುಗಳು ಮಾತನಾಡುತ್ತಾ, ಜನ ವಿರೋಧಿ ನೀತಿಯನ್ನು ಅನುಸರಿಸುತ್ತಿರುವ ಕಾಂಗ್ರೆಸ್ ಸರಕಾರದ ವಿರುದ್ಧ ಸಂಘಟಿತ ಹೋರಾಟ ಅತ್ಯವಶ್ಯ ಎಂದರು.

ನಂತರ ಕಾಂ| ರಾಮಕೃಷ್ಣ ಮಾತನಾಡುತ್ತಾ, ಈ ದೇಶದಲ್ಲಿ ನರಿಗಳನ್ನು ಕೊಂದರೆ ಶಿಕ್ಷೆ ವಿಧಿಸಲಾಗುತ್ತಿದೆ. ಆದರೆ ಅಸಂಖ್ಯಾತ ದಲಿತರ ಕಗ್ಗೊಲೆಯಾಗುತ್ತಿರುವಾಗ ತಪ್ಪಿತಸ್ಥರನ್ನು ರಕ್ಷಿಸಲಾಗುತ್ತಿದೆ. ಗ್ರಾಮೀಣ ಜನತೆಯ ಅಭ್ಯುದಯ ಕೇವಲ ಘೋಷಣೆಯಾಗಿಯೇ ಉಳಿದಿದೆ, ಎಂದರು. ಸರಕಾರದ ದಿವಾಳಿಖೋರ ನೀತಿಯನ್ನೆದುರಿಸಲು ರೈತ ಸಂಘದ ನೇತ್ರತ್ವದಲ್ಲಿ ಸಂಘಟಿತರಾಗಲು ಮನವಿಮಾಡಿದರು.

ನಂತರ ರೈತ ಸಂಘದ ಅಧ್ಯಕ್ಷ ಕಾಂ|| ತಂಬನ್ ಮಾತನಾಡುತಾ ರೈತ ಸಂಘವನ್ನು ಬಲಪಡಿಸಲು ವಿನಂತಿಸಿದರು. ಕೊನೆಯಲ್ಲಿ ಕಾಂ| ತ್ಯಾಂಪನವರು ಧನ್ಯವಾದಗಳನ್ನರ್ಪಿಸಿದರು. ಸಭೆಯು ಕೆಲವು ಸ್ಥಳೀಯ ಬೇಡಿಕೆಗಳ ಕುರಿತು ಠರಾವು ಮಾಡಿ, ಕೂಡಲೇ ಜಾರಿಗೊಳಿಸುವಂತೆ ಒತ್ತಾಯಿಸಿದೆ.

ಪಂಡಿತ್ ಪರಮಾನಂದರ ನಿಧನ

ಖ್ಯಾತ ಕ್ರಾಂತಿಕಾರಿ ಪಂಡಿತ್ ಪರಮಾನಂದು- ಏಪ್ರಿಲ್ 13 ರಂದು ದೆಹಲಿಯ ರಾಮ್‌ಮನೋಹರ್ ಲೋಹಿಯಾ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ.

ಗದರ್ ಪಕ್ಷದ ಸ್ಥಾಪಕ ಸದಸ್ಯರಲ್ಲೊಬ್ಬರಾಗಿದ್ದ ಪಂಡಿತ ಪರಮಾನಂದರು, ಪ್ರಥಮ ಲಾಹೋರ್ ಒಳಸಂಚು ಮೊಕದ್ದಮೆಯಲ್ಲಿ ಜೀವಾವಧಿ ಶಿಕ್ಷೆಗೊಳಗಾಗಿದರು. ಪಂಡಿತ್ ಪರಮಾನಂದ 40 ವರ್ಷ ಅಂಡಮಾನ್ ಕಾರಾಗ್ರಹದಲ್ಲಿ ಕಳೆದಿದ್ದರು.

ದೇಶದ ಸ್ವಾತಂತ್ರ್ಯಕ್ಕಾಗಿ ಅವಿರತ ಹೋರಾಡಿದ ಪರಮಾನಂದರು ಅಖಿಲ ಭಾರತ ಸ್ವಾತಂತ್ರ್ಯ ಹೋರಾಟಗಾರರ ಸಂಘದ ಅಧ್ಯಕ್ಷರೂ ಆಗಿದ್ದರು.

ಪಂಡಿತ್ ಪರಮಾನಂದರ ನಿಧನಕ್ಕೆ ಐಕ್ಯರಂಗ ತೀವ್ರ ಸಂತಾಪ ವ್ಯಕ್ತಪಡಿಸುತ್ತದೆ.

ಸಮಾಜವಾದಿ ದೇಶಗಳಲ್ಲಿ ಜನತೆಯ ಸತತ ಮುನ್ನಡೆ

1981 ಅಕ್ಟೋಬರ್ 6 ರಂದು ಜರ್ಮನ್ ಜನವಾದೀ ಗಣತಂತ್ರ ತನ್ನ ಮೂವತ್ತೆರಡನೇ ವಾರ್ಷಿಕೋತ್ಸವವನ್ನು ಆಚರಿಸಿತು. ಇತ್ತೀಚೆಗೆ ಸಮಾಜವಾದಿ ದೇಶ ಪ್ರಕಟಿಸಿದ 1980–85 ರ ಅವಧಿಯ ಪಂಚವಾರ್ಷಿಕ ಯೋಜನಾ ಪತ್ರದಲ್ಲಿನ ಒಂದು ಅಂಶ ಎಲ್ಲರ ಗಮನ ಸೆಳೆಯುವಂತಹದು. ಈ ಹಿಂದಿನ ಅಂದಾಜಿನ ಪ್ರಕಾರ ಸುಮಾರು 9000 ರೋಬೋಟ್‌ಗಳನ್ನು ('ಯಂತ್ರ ಮಾನವ'ರನ್ನು) ಉಪಯೋಗಿಸುವ ಯೋಜನೆಯಿತ್ತು. ಈಗ ಮೇಲೆ ತಿಳಿಸಿದ ಯೋಜನಾ ಪತ್ರದ ಪ್ರಕಾರ 1985ರೊಳಗೆ ಸುಮಾರು 45000 ಇಂತಹ ಯಂತ್ರಗಳನ್ನು ಅಲ್ಲಿನ ಕೈಗಾರಿಕೆಗಳಲ್ಲಿ ಉಪಯೋಗಕ್ಕೆ ಹಚ್ಚುವ ಯೋಜನೆಯಿದೆ. ಇದೇನು ಮುದ್ರಣ ದೋಷವಲ್ಲ— ಆ ದೇಶ ಸಮಾಜವಾದೀ ಮಾರ್ಗದಲ್ಲಿ ನಡೆದು ಸಾಧಿಸಿದ ಪ್ರಗತಿಯ ಫಲವೇ ಇದು.

ಕಳೆದ ದಶಕದಲ್ಲಿ ಈ ದೇಶದ ಜನತೆಯ ವರಮಾನ 50% ರಷ್ಟು ಹೆಚ್ಚಿತು. ಈ ಅವಧಿಯಲ್ಲಿ ಬೆಲೆಗಳು ಸ್ಥಿರವಾಗಿದ್ದುದರಿಂದ ಜನತೆಯ ನಿಜ ವರಮಾನವೂ ಇದೇ ಪ್ರಮಾಣದಲ್ಲಿ ಹೆಚ್ಚಿತು. ಸರಕಾರ ಕೈಗೊಂಡ ಕಲ್ಯಾಣ ಕಾರ್ಯಕ್ರಮಗಳ ಮೊತ್ತವೂ ಹೆಚ್ಚಿತು. ಕಳೆದ ಪಂಚವಾರ್ಷಿಕ ಯೋಜನೆಯಲ್ಲಿ ರಾಷ್ಟ್ರೀಯ ವರಮಾನ 25% ಹೆಚ್ಚಿತು. ಹಾಗೂ ಕೈಗಾರಿಕಾ ಉತ್ಪಾದನೆ 32% ರಷ್ಟು ಹೆಚ್ಚಿತು. ಮುಂದಿನ ಯೋಜನೆಯಲ್ಲಿ 1985 ರೊಳಗೆ ರಾಷ್ಟ್ರೀಯ ವರಮಾನವನ್ನು ಹಾಗೂ ಕೈಗಾರಿಕೋತ್ಪಾದನೆಯನ್ನು 33ರಷ್ಟು ಹೆಚ್ಚಿಸಲಾಗುವುದು. ವಸತಿ, ಶಿಕ್ಷಣ ಇತ್ಯಾದಿ ಸೌಲಭ್ಯಗಳಲ್ಲಿ 40-45% ವೃದ್ಧಿಯಾಗುವುದು. 1970ರಲ್ಲಿ 1000 ಮಾರ್ಕ್(ಜರ್ಮನ್ ನಾಣ್ಯ) ಗಳಷ್ಟು ಉತ್ಪಾದಿಸಲು 23 ಗಂಟೆಗಳ ಶ್ರಮದ ಅಗತ್ಯವಿದ್ದರೆ 1985 ರ ಅಂತ್ಯದೊಳಗೆ ಇದಕ್ಕೆ ಕೇವಲ 12 ಗಂಟೆಗಳ ಶ್ರಮ ಸಾಕಾಗುವುದು. ವಿಪರೀತ ಶ್ರಮಭಾರವಿರುವ ವರ್ಕ್‌ಶಾಪ್‌ಗಳಲ್ಲಿ, ಬೇಸರತರಿಸುವ ಕೆಲಸವಿರುವೆಡೆಗಳಲ್ಲಿ ಹಾಗೂ ಕಾರ್ಮಿಕರ ಆರೋಗ್ಯಕ್ಕೆ ಅಪಾಯವಿರುವಂತೆಡೆಗಳಲ್ಲಿ 'ಯಂತ್ರ ಮಾನವ'ರ್ನ ಹಾಗೂ ಇತರ ಎಲೆಕ್ಟ್ರಾನಿಕ್ ಯಂತ್ರಗಳನ್ನು ಉಪಯೋಗಿಸಲಾಗುವುದು. ಹೀಗೆ ಯಾಂತ್ರೀಕರಣ ನಮ್ಮ ದೇಶದಲ್ಲಿ ನಡೆಯುವುದಾದರೆ ಅದು ಕೇವಲ ಕೈಗಾರಿಕೆಗಳ ಮಾಲೀಕರ ಲಾಭ ಹೆಚ್ಚಿಸಲಿಕ್ಕಾಗಿ ಮಾತ್ರ ನಡೆಯುತ್ತಿತ್ತು. ಮತ್ತು ಅಷ್ಟು ಸಂಖ್ಯೆಯ ಕಾರ್ಮಿಕರನ್ನು ಕೆಲಸದಿಂದ ವಜಾಮಾಡಲಾಗುತ್ತಿತ್ತು. ಆದರೆ ಕೈಗಾರಿಕೆಗಳು ಇಡೀ ದೇಶದ ಸ್ವತ್ತಾದ ಸಮಾಜವಾದೀ ದೇಶ ಜರ್ಮನಿಯಲ್ಲಿ ಹೀಗಾಗುವುದಿಲ್ಲ. ಆ ಕಾರ್ಮಿಕರಿಗೆ ಅದೇ ಕೈಗಾರಿಕೋದ್ಯಮಗಳ ವೆಚ್ಚದಲ್ಲೇ ಇನ್ನೂ ಉಚ್ಚಮಟ್ಟದ ತರಬೇತಿ ಕೊಟ್ಟು ಇನ್ನೂ ಹೆಚ್ಚು ವರಮಾನವಿರುವ ಇನ್ನೂ ಹೆಚ್ಚು ಜವಾಬ್ದಾರಿಯುತವಾದ ಹಾಗೂ ಉತ್ತಮಮಟ್ಟದ ಕೆಲಸ ಒದಗಿಸಲಾಗುವುದು. (ಈ ದೇಶದಲ್ಲಿ ಕೆಲಸವಿಲ್ಲದ ಕೈಗಳೇ ಇಲ್ಲ. ಅದೇ ಪಕ್ಕದ ಪಶ್ಚಿಮ ಜರ್ಮನಿಯಲ್ಲಿ ನೂರಕ್ಕೆ ಆರು ಜನವಾದರೂ ನಿರುದ್ಯೋಗಿಗಳು!) ಸಮಾಜವಾದೀ ವ್ಯವಸ್ಥೆಯಲ್ಲಿ ಕಾರ್ಖಾನೆ ಕಾರ್ಮಿಕರ ಹಾಗೂ ನೌಕರರ ವೇತನವನ್ನು ಕ್ರಮೇಣ ಹೆಚ್ಚಿಸಿ, ಸಾಮೂಹಿಕ ರೈತರ ವರಮಾನ ಹೆಚ್ಚಿಸಿ, ವಿಶ್ರಾಂತಿವೇತನವನ್ನು ಅಗಾಧ ಪ್ರಮಾಣದಲ್ಲಿ ಹೆಚ್ಚಿಸಿ, ಕೆಲಸದ ಗಂಟೆಗಳನ್ನು ಕಮ್ಮಿ ಮಾಡಿ, ಉಚಿತ ಸಾರ್ವಜನಿಕ ಸೌಲಭ್ಯಗಳನ್ನು ಹೆಚ್ಚಿಸಿ ಜನತೆಯ ಜೀವನಮಟ್ಟವನ್ನು, ಸಾಂಸ್ಕೃತಿಕ ಅವಕಾಶಗಳನ್ನು ಹೆಚ್ಚಿಸುವ ಕಡೆಗೆ ಆದ್ಯಗಮನ ಹರಿಸಲಾಗುತ್ತದೆ. ಸೋವಿಯೆತ್ ಒಕ್ಕೂಟದ ಜನತೆಯ ಜೀವನ ಮಟ್ಟದಲ್ಲಿ ಕಂಡು ಬರುತ್ತಿರುವ ಅಗಾಧ ಹೆಚ್ಚಳ ಇದಕ್ಕೆ ಇನ್ನೊಂದು ಉದಾಹರಣೆ. ಈ ನವೆಂಬರ್ 7 ರಂದು ಮಹಾನ್ ಅಕ್ಟೋಬರ್ ಕ್ರಾಂತಿಯ 64ನೇ ವಾರ್ಷಿಕೋತ್ಸವವನ್ನು ಆಚರಿಸಿರುವ ಸೋವಿಯೆಟ್ ಜನತೆ ಈಗ ಹನ್ನೊಂದನೇ ಪಂಚವಾರ್ಷಿಕ ಯೋಜನೆಯಲ್ಲಿ ಕಾಲಿರಿಸಿದೆ.

ಕಳೆದ ಒಂದು ದಶಕದಲ್ಲಿ ಆರ್ಥಿಕ ರಂಗದಲ್ಲಿ ಸೋವಿಯೆತ್ ಜನ್ನ ಅಪಾರ ಯಶಸ್ಸುಗಳಿಸಿದ್ದಾರೆ. ಅವರ ನಿಜ ವರಮಾನ ಈ ಅವಧಿಯಲ್ಲಿ ಒಂದೂವರೆ ಪಟ್ಟಾಯಿತು. ರಾಷ್ಟ್ರೀಯ ವರಮಾನದಲ್ಲಿ ಸಾರ್ವಜನಿಕ ಬಳಕೆ ಹಾಗೂ ಸಾಂಸ್ಕೃತಿಕ ಸೌಲಭ್ಯಗಳಿಗಾಗಿ ಮೀಸಲಿಟ್ಟ ಮೊತ್ತದಲ್ಲೂ 26% ದಷ್ಟು ವೃದ್ಧಿಯಾಗಿದೆ. ಅಭಿವೃದ್ಧಿ ಹೊಂದಿದ ಸಮಾಜವಾದೀ ಆರ್ಥಿಕ ವ್ಯವಸ್ಥೆಯಿಂದಾಗಿಯೇ ಜನತೆಯ ಜೀವನ ಮಟ್ಟದಲ್ಲಿ ಸರ್ವತೋಮುಖ ಪ್ರಗತಿ ಸಾಧಿಸಲು ಈ ಅಪಾರ ಅವಕಾಶಗಳು ದೊರೆಯಲು ಸಾಧ್ಯವಾದದ್ದು ಎಂದು ಇಲ್ಲಿ ಬೇರೆ ಹೇಳಬೇಕಾಗಿಲ್ಲ.

ಸೋವಿಯೆತ್ ಒಕ್ಕೂಟದ ಪ್ರಗತಿಯ ಇನ್ನೊಂದು ಮುಖ್ಯ ಅಂಶವನ್ನು ಗಮನಿಸಬೇಕು. ಜನತೆಯ ಎಲ್ಲಾ ವಿಭಾಗಗಳ ನಿಜ ವರಮಾನ ಸತತವಾಗಿ ಏರುತ್ತಿದ್ದರೂ, ಕಮ್ಮಿ ವೇತನ ಪಡೆಯುತ್ತಿದ್ದ ಕಾರ್ಮಿಕರ ಹಾಗೂ ಕಡಿಮೆ ವರಮಾನವಿದ್ದ ಸಾಮೂಹಿಕ ರೈತ ಸಂಸಾರಗಳ ವರಮಾನದ ಏರಿಕೆಯ ದರ ಉಳಿದವರಿಗಿಂತ ಹೆಚ್ಚಿತ್ತು. ಸಾಮಾಜಿಕ ಏಕರೂಪತೆ ಹಾಗೂ ಹಳ್ಳಿ–ಪಟ್ಟಣಗಳ ನಡುವಿನ ಜೀವನ ಸ್ಥಿತಿಗಳಲ್ಲಿನ ವ್ಯತ್ಯಾಸವನ್ನು ಅಳಿಸುವಲ್ಲಿ ಇದು ಬಹಳಷ್ಟು ಸಹಕಾರಿಯಾಗಿದೆ. ಸೋವಿಯೆತ್ ಒಕ್ಕೂಟ ಕಮ್ಯುನಿಸ್ಟ್ ಪಕ್ಷದ 26ನೇ ಸಮ್ಮೇಳನ ಜನತೆಯ ಭೌತಿಕ ಹಾಗೂ ಸಾಂಸ್ಕೃತಿಕ ಮಟ್ಟವನ್ನು ಮತ್ತಷ್ಟು ಎತ್ತರಿಸಿ ವ್ಯಕ್ತಿಯ ಸರ್ವತೋಮುಖ ಬೆಳವಣಿಗೆಗೆ ಎಲ್ಲಾ ಅವಕಾಶ ಕಲ್ಪಿಸಿಕೊಡಲು ಕಾರ್ಯಕ್ರಮ ರೂಪಿಸಿದೆ. ಇದರಲ್ಲಿಯೂ ಎಲ್ಲಾ ಸಾಮಾಜಿಕ ಗುಂಪುಗಳ ಹಿತಾಸಕ್ತಿಗಳನ್ನೂ ಗಮನದಲ್ಲಿಟ್ಟುಕೊಂಡು ಇನ್ನೂ ಉಳಿದಿರುವ ಸಾಮಾಜಿಕ ಅಂತರಗಳನ್ನು ಅಳಿಸುವುದರ ಕಡೆಗೆ ಲಕ್ಷ್ಯ ಹರಿಸಲಾಗಿದೆ. ದೈಹಿಕ ಶ್ರಮವನ್ನು ಕಮ್ಮಿಮಾಡಲು ವ್ಯಾಪಕ ಹಾಗೂ ಸಮಗ್ರ ದೃಷ್ಟಿಯ ಯಾಂತ್ರೀಕರಣದ ಕಾರ್ಯಕ್ರಮವೂ ಇದರಲ್ಲಿದೆ. ಮಹಿಳೆಯರು, ಮಕ್ಕಳಿರುವ ಸಂಸಾರಗಳು ಇತ್ಯಾದಿಯವರಿಗೆ ಸರಕಾರದ ನೆರವನ್ನು ಇನ್ನಷ್ಟು ಹೆಚ್ಚಿಸಲಾಗುವುದು; ಸಾರ್ವಜನಿಕ ಸೌಲಭ್ಯಗಳನ್ನು ಮತ್ತಷ್ಟು ಹೆಚ್ಚಿಸಲಾಗುವುದು. ದೈನಿಕ ಅಗತ್ಯ ವಸ್ತುಗಳು ಹಾಗೂ ಟಿ. ವಿ. ಮೊದಲಾದ ಇತರ ವಸ್ತುಗಳ ಬೇಡಿಕೆಗಳನ್ನು ಸಂಪೂರ್ಣವಾಗಿ ಪೂರೈಸುವುದಕ್ಕಾಗಿ ಈ ಬಳಕೆಯ ವಸ್ತುಗಳ ಉತ್ಪಾದನೆಯನ್ನು ಒಂದೂವರೆ ಪಟ್ಟು ಹೆಚ್ಚಿಸಲಾಗುವುದು.

ಈ ರೀತಿ ಒಂದೆಡೆ ಸಾಮಾಜಿಕ ಅಂತರಗಳನ್ನು ಅಳಿಸಿ ಜನಸಾಮಾನ್ಯರಿಗೆ ಸಿಗುವ ಸೌಲಭ್ಯಗಳನ್ನು ಸತತವಾಗಿ ಹೆಚ್ಚಿಸಲು ಸಮಾಜವಾದಿ ದೇಶಗಳಲ್ಲಿ ಯೋಜನೆಗಳನ್ನು ರೂಪಿಸಲಾಗುತ್ತಿದ್ದರೆ, ಇನ್ನೊಂದೆಡೆ ಬಂಡವಾಳಶಾಹೀ ದೇಶಗಳಲ್ಲಿನ ಪರಿಸ್ಥಿತಿ ತದ್ವಿರುದ್ಧ. ಅಲ್ಲಿ ಮಾಲೀಕರ ವರಮಾನ ಹೆಚ್ಚಿಸಿ, ಜನಸಾಮಾನ್ಯರ ಜೀವನ ಮಟ್ಟವನ್ನು ಪಾತಾಳಕ್ಕೆ ತಳ್ಳುವ ಪ್ರಯತ್ನಗಳು ನಡೆಯುತ್ತಿವೆ. ಇವು ನಡೆಯುತ್ತಿರುವುದು ಭಾರತದಲ್ಲಿ ಮಾತ್ರವಲ್ಲ, ಶ್ರೀಮಂತ ಹಾಗೂ ಅತ್ಯಂತ ಅಭಿವೃದ್ಧಿ ದೇಶವೆನಿಸಿದ ಅಮೇರಿಕಾದಲ್ಲೂ ಇದೆ ಕಥೆ.

●

ಬಂಡವಾಳಶಾಹೀ ದೇಶಗಳಲ್ಲಿ ಜನತೆಯ ಮೇಲೆ ಭಾರೀ ಹಲ್ಲೆ

ಹೆಚ್ಚುತ್ತಿರುವ ಹಣದುಬ್ಬರ, ನಿರುದ್ಯೋಗ ಹಾಗೂ ಆರ್ಥಿಕ ಹಿಂಜರಿತವನ್ನು ತಡೆಯುವ ಪ್ರಯತ್ನವಾಗಿ ಅಮೇರಿಕಾದ ರೇಗನ್ ಸರಕಾರ ಇತ್ತೀಚೆಗೆ ತನ್ನ ಜನತೆಯ ಮೇಲೆ ಎಲ್ಲಾ ದಿಕ್ಕುಗಳಿಂದ ಆರ್ಥಿಕ ಹಲ್ಲೆ ನಡೆಸಲಾರಂಭಿಸಿದೆ. ಈ ಅಕ್ಟೋಬರ್ ಮೊದಲನೇ ತಾರೀಕಿನಿಂದ ಅಮೇರಿಕಾದ ಓರೆಗಾನ್ ರಾಜ್ಯದ 12,000 ಬಡ ಕುಟುಂಬಗಳು ಪಡೆಯುತ್ತಿದ್ದ ಹಲವು ಸೌಲಭ್ಯಗಳನ್ನು ಕಳಕೊಂಡಿವೆ. ಮಿಚಿಗಾನ್ ರಾಜ್ಯದ 32 ಸಾವಿರ ಜನರಿಗೂ ಇದೇ ಬವಣೆ. ಇನ್ನೊಂದು ರಾಜ್ಯದಲ್ಲಿ ಮೂರು ಆರೋಗ್ಯ ಕೇಂದ್ರಗಳನ್ನು ಮುಚ್ಚಲಾಗುತ್ತಿದೆ. ಹೊಸ ಮುಂಗಡ ಪತ್ರದಲ್ಲಿ ಸಾರ್ವಜನಿಕ ಕಾಮಗಾರಿಗಳ ಮೊತ್ತದಲ್ಲಿ 89% ಕಡಿತವಾಗಿದೆ. ವಿದ್ಯಾರ್ಥಿಗಳಿಗೆ ನೀಡುವ ಸಾಲದಲ್ಲಿ 43% ಕಡಿತ; ಬಡಜನರಿಗೆ ವಿದ್ಯುಚ್ಛಕ್ತಿ ಸಹಾಯಧನದಲ್ಲಿ 34% ಕಡಿತ. ಅದೇ ಇನ್ನೊಂದು ಕಡೆ ವ್ಯಾಪಾರೀ ವೃತ್ತಗಳಿಗೆ 'ಕರ ಸುಧಾರಣೆ'ಯ ಮೂಲಕ ಭಾರೀ ನೆರವು ನೀಡಲಾಗುತ್ತಿದೆ. ವ್ಯಾಪಾರಕ್ಕೆ ಪ್ರೋತ್ಸಾಹ ಕೊಡುವ ನೆಪದಲ್ಲಿ ಅವರ ಮೇಲಿನ ತೆರಿಗೆಗಳನ್ನು ಕಡಿಮೆಮಾಡಲಾಗುತ್ತಿದೆ. ಇದರ ಜತೆಗೆ ಶಸ್ತ್ರಾಸ್ತ್ರ ತಯಾರಿಕೆಗೆ ಮೀಸಲಿಟ್ಟ ಮೊತ್ತವನ್ನು ಭಾರೀ ಪ್ರಮಾಣದಲ್ಲಿ ಹೆಚ್ಚಿಸಿದೆ. ಮುಂದಿನ ಐದು ವರ್ಷಗಳಲ್ಲಿ ಅಮೇರಿಕಾದ ಜನತೆ ಒಂದೂವರೆ ಲಕ್ಷ ಕೋಟಿ ಡಾಲರುಗಳನ್ನು ಇದಕ್ಕಾಗಿಯೇ ತೆರಬೇಕಾಗುತ್ತದೆ. ಅಂದರೆ ಆರ್ಥಿಕವಾಗಿ ಇನ್ನಷ್ಟು ಹೊಡೆತಗಳನ್ನು ಉದಾಹರಿಸಬೇಕಾಗುತ್ತದೆ. "ರೇಗನ್ ಅರ್ಥಶಾಸ್ತ್ರ" ಎಂದು ಈಗ ಹೆಸರಾಗಿರುವ ಈ ಕ್ರಮಗಳು ಅಮೇರಿಕಾದ ಲಕ್ಷಗಟ್ಟಲೆ ಜನರ ದುರಂತದ ಹಾಗೂ ಬರಲಿರುವ ಇನ್ನೂ ತೀವ್ರ ಬಿಕ್ಕಟ್ಟಿನ ಮುನ್ಸೂಚನೆ.

ಬಂಡವಾಳಶಾಹೀ ದೇಶಗಳಲ್ಲಿ ಅತೀ ಶ್ರೀಮಂತ ದೇಶವಾದ ಅಮೇರಿಕಾ ದೇಶದ ಜನಸಾಮಾನ್ಯರ ಸ್ಥಿತಿಯೇ ಹೀಗಿರುವಾಗ ಉಳಿದ ಬಂಡವಾಳಶಾಹೀ ದೇಶಗಳ ಜನತೆಯ ಸ್ಥಿತಿಯ ಬಗ್ಗೆ ಬೇರೆ ಹೇಳಬೇಕಾಗಿಲ್ಲ. ಕಳೆದ ಒಂದು ದಶಕದಲ್ಲಿ ನಿರುದ್ಯೋಗಿಗಳ ಸಂಖ್ಯೆ ಈ ದೇಶಗಳಲ್ಲಿ ಇಮ್ಮಡಿಯಾಗಿ ಈಗ ಅದು ಎರಡೂವರೆ ಕೋಟಿಯನ್ನು ಸಮೀಪಿಸುತ್ತಿದೆ. ಬೆಲ್ಜಿಯಮ್‌ನಲ್ಲಿ ನಿರುದ್ಯೋಗಿಗಳ ಸಂಖ್ಯೆ 15%, ಬ್ರಿಟನ್ನಿನಲ್ಲಿ 13%, ಫ್ರಾನ್ಸ್‌ನಲ್ಲಿ 9%, ಅದೇ ಸೋವಿಯೆತ್ ಒಕ್ಕೂಟದಲ್ಲಿ ಕಳೆದ 50 ವರ್ಷಗಳಲ್ಲಿ, ಜರ್ಮನ್ ಗಣತಂತ್ರದಲ್ಲಿ ಕಳೆದ 32 ವರ್ಷಗಳಲ್ಲಿ ನಿರುದ್ಯೋಗವೆಂಬುದೇ ಇಲ್ಲ. ಹಣದುಬ್ಬರ ಹಾಗೂ ಜನತೆಯ ನಿಜ ವರಮಾನದ ಬಗೆಗೂ ಇದನ್ನೇ ಹೇಳಬಹುದು. ಬಂಡವಾಳಶಾಹೀ ದೇಶಗಳಲ್ಲಿ ದಿನೇ ದಿನೇ ಹಣದುಬ್ಬರ ಹೆಚ್ಚುತ್ತಾ ಹೋಗಿ ಜನತೆಯ ನಿಜ ವರಮಾನ ಇಳಿಯುತ್ತಿದ್ದರೆ ಸಮಾಜವಾದೀ ದೇಶಗಳಲ್ಲಿ ಕಳೆದ ಎರಡು ದಶಕಗಳಲ್ಲಿ ಬೆಲೆಗಳು ಸ್ಥಿರವಾಗಿವೆ.

ಬಹಳ ಮುಂದುವರಿದ ಅಮೇರಿಕಾದ ಅನಿರ್ಬಂಧಿತ ಬಂಡವಾಳಶಾಹೀ ವ್ಯವಸ್ಥೆಗಿಂತ ಸಮಾಜವಾದೀ ಸೋವಿಯೆತ್ ಒಕ್ಕೂಟದ ಯೋಜಿತ ಅರ್ಥವ್ಯವಸ್ಥೆಯ ಶ್ರೇಷ್ಠತೆಯನ್ನು ಈ ಕೆಳಗಿನ ಅಂಶಗಳು ಸ್ಪಷ್ಟಪಡಿಸುತ್ತವೆ.

ಈ ಹಿಂದೆ ಹೇಳಿದಂತೆ ಜನಸಾಮಾನ್ಯರ ಬಳಕೆಗಾಗಿ ವಿನಿಯೋಗವಾಗುವ ಮೊತ್ತವನ್ನು ಮುಂದಿನ ಐದು ವರ್ಷಗಳಲ್ಲಿ 20-22 ಶೇಕಡಾ ಹೆಚ್ಚಿಸುವ ಯೋಜನೆ ಸೋವಿಯೆತ್ ಒಕ್ಕೂಟದ್ದಾದರೆ ಅದರಲ್ಲಿ ತೀವ್ರ ಕಡಿತ ತರುವ ಯೋಜನೆ ಅಮೇರಿಕಾದ ರೇಗನ್ ಸರಕಾರದ್ದು. ಜನಸಾಮಾನ್ಯರ ಹಾಗೂ ದುಡಿಯುವ ಜನತೆಯ ದೃಷ್ಟಿಯಿಂದ ಹಾಗೂ ಇಡೀ ದೇಶದ ಹಿತದೃಷ್ಟಿಯಿಂದ ಈ ಎರಡು ವ್ಯವಸ್ಥೆಗಳಲ್ಲಿ ಯಾವುದು ಉತ್ತಮ ಎಂಬುದರಲ್ಲಿ ಈಗ ಸಂಶಯವೇ ಉಳಿದಿಲ್ಲ.

1970-79ರ ಅವಧಿಯಲ್ಲಿ ಸರಾಸರಿ ಬೆಳವಣಿಗೆಯ ಶೇಕಡಾ ದರಗಳು.

	ಸೋವಿಯೆತ್ ಒಕ್ಕೂಟ	ಅಮೇರಿಕಾ ಸಂಯುಕ್ತ ಸಂಸ್ಥಾನ
ರಾಷ್ಟ್ರೀಯ ಆದಾಯ	7.7	3.5
ಕೈಗಾರಿಕಾ ಉತ್ಪಾದನೆ	9.1	4.3
ಕೃಷಿ ಉತ್ಪಾದನೆ	3.5	1.7
ಬಂಡವಾಳ ವಿನಿಯೋಗ	8.7	3.1
ಕಾರ್ಮಿಕ ಉತ್ಪಾದಕತೆ	6.7	2.2

●

‘ತಾಯಿ’—ಕ್ರಾಂತಿಕಾರಿಗಳಿಗೆ ಮಾರ್ಗದರ್ಶಿ

……..ಎಸ್. ಎಸ್. ಹಿರೇಮಠ

ವಿಶ್ವ ಸಾಹಿತಿ ಗಾರ್ಕಿ ಜಗತ್ತಿನ ಬಂಡಾಯ ಲೇಖಕರಿಗೆ ಒಂದು ಮಾದರಿ. ಎಲ್ಲ ಯುಗಗಳ ಬರಹಗಾರರಿಗೆ ಒಂದು ಆದರ್ಶ. ಅವನು ರಶಿಯದ ಮಾನವನ ಕೊನೆಯ ಹೋರಾಟದ ಅದ್ಭುತ ಉತ್ಪನ್ನ. ಹೊಸ ಮಾನವನ ಸೃಷ್ಟಿಕ್ರಿಯೆಗೆ ಸಾಹಿತ್ಯಿಕ ಮುನ್ನುಡಿ ಆತ. ಅವನ ತಾಯಿ ವಿಶ್ವ ಸಾಹಿತ್ಯದ ಶ್ರೇಷ್ಠ ಕೃತಿಗಳಲ್ಲೊಂದು.

ಗಾರ್ಕಿ ‘ಜೀವನಕ್ಕೆ ಶಿಕ್ಷಕ, ನ್ಯಾಯದ ಹೋರಾಟಗಾರ, ಸಾಂಸ್ಕೃತಿಕ ಶಕ್ತಿಗಳ ಸಂಘಟಕ.’ ‘ಮನುಷ್ಯ ತನ್ನ ಬದುಕಿನ ಶಿಲ್ಪಿಯೂ ಯಜಮಾನನೂ ತಾನೇ ಎಂಬುದನ್ನರಿಯಬೇಕು’ ಎನ್ನುತ್ತಿದ್ದ ಗಾರ್ಕಿ.

ಜಗತ್ತಿನ ಅಲ್ಲಿಯವರೆಗಿನ ಇತಿಹಾಸವನ್ನೇ ಬದಲಿಸಿದ ರಶಿಯದ ಚಾರಿತ್ರಿಕ ಅಕ್ಟೋಬರ್ ಕ್ರಾಂತಿಯ ಹಿಂದೆ ನಡೆದ ಚಳುವಳಿಗಳ ಸಿದ್ಧತೆ ಮತ್ತು ಅದರಲ್ಲಿ ಭಾಗಿಯಾದ ತಾಯಿ, ಅವನ ಮಗ ಕಾರ್ಮಿಕ ಪ್ಯೋತರ್ ಈ ಕಾದಂಬರಿಯ ನಾಯಕರು. ಅವರ ಜತೆ ನಿಕಟ ಸಂಪರ್ಕವಿಟ್ಟುಕೊಂಡಿದ್ದ ಗಾರ್ಕಿ ಜಗತ್ತಿನ ಕಾರ್ಮಿಕರ ಚಳುವಳಿಗೆ ಒಂದು ಶ್ರೇಷ್ಠ ಉದಾಹರಣೆಯನ್ನು ನಿರ್ಮಿಸಿದ.

ನಾಗರಿಕತೆ, ಸಂಸ್ಕೃತಿಗಳ ನಿರ್ಮಾಪಕರಾಗಿ, ತಾವೇ ಅದರ ಹಕ್ಕುದಾರರಾಗಿರದ ದುಡಿವ ಜನಕೋಟಿಯ ಜಾಗತಿಕ ವಿಮೋಚನೆಗಾಗಿಯೂ ಅವರ ಹಕ್ಕು, ನ್ಯಾಯ, ವಿಶ್ವಪ್ರೇಮ, ಮಾನವೀಯತೆಗಳ ಗುರಿಗಾಗಿಯೂ ನಿಂತಿರುವ ಮಹೋನ್ನತ ತತ್ವಜ್ಞಾನ ಮತ್ತು ಕ್ರಿಯಾತಂತ್ರ ವೈಜ್ಞಾನಿಕ ಸಮತಾವಾದ. ಅಂಥ ಆದರ್ಶವನ್ನು ಸಾಕಾರಗೊಳಿಸಿದ ವ್ಯಕ್ತಿಗಳ ಚಿತ್ರಣ ‘ತಾಯಿ’. ‘ಸ್ವಾತಂತ್ರ್ಯ ಶೋಷಿತರ ಸೊತ್ತು, ಸ್ವಾತಂತ್ರ್ಯ ಹೋರಾಟಗಳು ಯಾವಾಗಲೂ ಶೋಷಿತರಿಂದ, ಬಡಜನರಿಂದ, ಕಾರ್ಮಿಕರಿಂದಲೇ ರೂಪುಗೊಳ್ಳುತ್ತವೆಂದು’ ಕಾಮೂ ಹೇಳುತ್ತಾನೆ.

ಮಾರ್ಕ್ಸ್‌ವಾದ ಹುಟ್ಟಿಸಿದ ಅತ್ಯಮೂಲ್ಯ ಸೃಜನಶೀಲ ಅಭಿವ್ಯಕ್ತಿ ತಾಯಿ. ‘ನನಗೆ ಗುಲಾಮರನ್ನು ಕಂಡರಾಗದು. ಯೋಧರನ್ನು ನಾನು ಪ್ರೀತಿಸುತ್ತೇನೆ’ ಎನ್ನುವ ಕಾದಂಬರಿಯ ಪ್ರೇರಕಶಕ್ತಿ ಪ್ಯೋತರ (461 ಪುಟ) (ಪಾವೆಲ್) ಕಲಾಕೃತಿಯಾದ ವಾಸ್ತವ ಸಂಕೇತ. ಸಾವಿನ ದವಡೆಗಳಿಂದ ಹಲವು ಸಲ ತಪ್ಪಿಸಿಕೊಂಡು ಹೊಸ ಸಮಾಜ ನಿರ್ಮಾಣದ ಹರಿಕಾರ ಪ್ರಮುಖನಾದ ಅಸಂಖ್ಯರಲ್ಲಿ ಒಬ್ಬ.

ಕಾದಂಬರಿಯ ನಾಯಕಿಗೆ (ಪಾವೆಲ್‌ನ ತಾಯಿ) ಆಧಾರ ಪಾತ್ರವಾದ ಅನ್ನ, ಮೋಚಿ ಕುಟುಂಬದಲ್ಲಿ ಜನಿಸಿ ಏಳು ಮಕ್ಕಳನ್ನು ಸಾಕುವ ಬಡ ವಿಧವೆ. ಕ್ರಾಂತಿಕಾರಿಯಾಗಿ ತನ್ನನ್ನು ಸಮರ್ಪಿಸಿಕೊಂಡ ಮಹಾ ಜೀವ. ಕಾದಂಬರಿಯ ಕೊನೆಗೆ, ಪೋಲಿಸರಿಗೆ ಸಿಕ್ಕು ಬಿದ್ದು, ಹೊಡೆತ ತಿನ್ನುವಾಗ ತಾಯಿ ಹೇಳುತ್ತಾಳೆ “ರಕ್ತಸಾಗರ ಕೂಡ ಸತ್ಯವನ್ನು ಮುಳುಗಿಸಲಾರದ್ದು”. (455 ಪುಟ) ಇಂಥ ಸತ್ಯಕ್ಕೆ ಜೀವ ತೆಯ್ಯುವ ಜನತೆಯ ಚಿತ್ರಣ ‘ತಾಯಿ’ ಕಾದಂಬರಿ.

*ರಶಿಯದ 1917ರ ಕ್ರಾಂತಿಗೂ, ಈವೊತ್ತು ಶೋಷಿತ ರಾಷ್ಟ್ರಗಳಲ್ಲಿ ನಡೆಯಬೇಕಾಗಿರುವ ಕ್ರಾಂತಿಗಳಿಗೂ ಹಲವು ಮುಖ್ಯ ಸಾಂಧರ್ಬಿಕ ವ್ಯತ್ಯಾಸಗಳಿದ್ದರೂ ಮೂಲ ಆಕರಗಳಲ್ಲೊಂದಾಗಿ, ಚರಿತ್ರೆಯ ನಿರ್ಧಿಷ್ಟ ಪಾತವಾಗಿ ಅಕ್ಟೋಬರ್ ಕ್ರಾಂತಿಗೆ ಆದ್ಯಸ್ಥಾನವಿದೆ. ಅದರ ಸಾಹಿತ್ಯಿಕ ದಾಖಲೆಗಳಲ್ಲೊಂದಾದ ತಾಯಿಗೂ ಕೂಡ. ಈಗಿನ ಶೋಷಿತ ರಾಷ್ಟ್ರಗಳ ಬಂಡಾಯ ಲೇಖಕರಿಗೆ ಹೆಚ್ಚಿನ ಜವಾಬ್ದಾರಿಗಳೂ, ಭಿನ್ನ ಆಯಾಮಗಳೂ ಇರಬೇಕಾಗಿರೋದು ಕೂಡ ಚಾರಿತ್ರಿಕ ವಾಸ್ತವ.

ಕನ್ನಡದ ಪ್ರಸ್ತುತ ಹೋರಾಟಗಳ ಸಂದರ್ಭದಲ್ಲಿ ತಾಯಿಯ ರಿಲೆವನ್ಸಿಯನ್ನು ಅರಿಯಬೇಕಾಗಿದೆ. ಆಸ್ಟ್ರೇಲಿಯದ ಒಬ್ಬ ಲೇಖಕ ಸಧ್ಯದ ಭಾರತವನ್ನು ಕ್ರಾಂತಿ ಪೂರ್ವ ರಶಿಯಕ್ಕೆ ಸಾಧಾರವಾಗಿ ಹೋಲಿಸುತ್ತಾನೆಂಬುದನ್ನು ನೆನಪಿಸಿಕೊಳ್ಳಬಹುದು. (“ಸಂಡೇ”—“God & Politicians” ಗ್ರಂಥದ ಉದ್ಧೃತ ಭಾಗದಲ್ಲಿ)

ಕ್ರಾಂತಿ ಸರಳರೇಖೆಯಲ್ಲ; ಮಿಲ್ಟ್ರಿ ಶಿಸ್ತೊಂದೇ ಅಲ್ಲ. ಅದು ‘ಕಲೆ’ ಎನ್ನುತ್ತಾರೆ ಲೆನಿನ್. ಸಾಹಿತ್ಯಿಕ ಪರಿಭಾಷೆಯಲ್ಲಿ ಅದರ ಪರಿಪೂರ್ಣ ಅರ್ಥವೇ ತಾಯಿ. ತುಳಿಯಲ್ಪಟ್ಟ ಜನರ ಸಾಂಸ್ಕೃತಿಯ ಅರ್ಥ, ಅವಲಂಬನೆ, ಆದರ್ಶಗಳನ್ನು ಎತ್ತಿಹಿಡಿಯಲು, ಅಭ್ಯಸಿಸಲು, ಪುನಃ ಸೃಷ್ಟಿಸಲು ಮತ್ತು ಈ ಅಸ್ತ್ರದಿಂದಲೇ ಶೋಷಕರ ಸಂಸ್ಕೃತಿಯ ಅಪಾಯಗಳ ಮೇಲೆ ಬಲವಾದ ಪ್ರಹಾರ ಕೊಡಲು ನಿಲ್ಲಬೇಕಾದ ಲೇಖಕರಿಗೆ ಗಾರ್ಕಿಯ ತಾಯಿ ಮಾರ್ಗದರ್ಶಿಯೇ ಸರಿ.

*ಕ್ರಾಂತಿಪೂರ್ವದ ಭೀಕರ ಹೋರಾಟದಲ್ಲಿ ತೊಡಗಿದ ಸಾಮಾನ್ಯರಲ್ಲಿ ಏಳಬಹುದಾದ ಭಯ, ಅನುಮಾನ, ದಿಗಿಲು, ಸುಖ, ಭ್ರಮೆ, ತೃಪ್ತಿ, ಎಲ್ಲಕ್ಕೂ ಸಮರ್ಪಕ ವಿವರಣೆ, ಉತ್ತರ ಹೇಳುತ್ತದೆ ‘ತಾಯಿ.’ ವ್ಯವಸ್ಥೆಯ ಬದಲಾವಣೆಯಂಥ ಪ್ರಯಾಸದ ಕೆಲಸದ ಹಿಂದಿರುವ ಅಪಾರ ಮಾನವಪ್ರೇಮ, ಸಂಯಮಪೂರ್ಣ ಆಶಾವಾದ, ನಿಷ್ಠೆ, ತ್ಯಾಗಗಳ ಪ್ರೇರಣೆ, ಮಹತ್ವವನ್ನೂ ಗೌರವನ್ನು ಗಳಿಸಿಕೊಡುವವು.

ಮಾರ್ಕ್ಸ್‌ವಾದ ಮಾತ್ರವೇ ದುಡಿಮೆಗಾರರನ್ನು ಚರಿತ್ರೆಯ ನಿಜ ನಿರ್ಮಾಣದ ಹರಿಕಾರನೆಂದೂ, ಭವಿಷ್ಯತ್ತಿನ ಅಧಿಪತಿಯೆಂದೂ ಆಮೂಲಾಗ್ರವಾಗಿ ಪರಿಶೋಧಿಸಿತು, ಪ್ರತಿಪಾದಿಸಿತು. ಸಾಮಾನ್ಯ ವ್ಯಕ್ತಿಗಳಲ್ಲಿ ಅಸಾಮಾನ್ಯ ಮೌಲ್ಯಗಳು, ಅರಳುವ ಶಕ್ತಿ ಹುದುಗಿರುತ್ತದೆ. ಇಂಥ ಅನೇಕ ಮೌಲಿಕ ಪಾತ್ರಗಳು ‘ತಾಯಿ’ ಕಾದಂಬರಿಯ ಪಾತ್ರಗಳು.

“ನಾನು ಬರೆಯಲು ಕಲಿತುದು ಹೇಗೆ ?” ಎಂಬ ಲೇಖನದಲ್ಲಿ ಗಾರ್ಕಿ ಸಾಹಿತ್ಯಿಕ ಸೃಜನಶೀಲತೆ, ಎಲ್ಲ ದೇಶದ ಎಲ್ಲ ಜನರಲ್ಲಿ ಒಂದೇ ಆಗಿರುತ್ತದೆಂದೂ, ಅನಾದಿಕಾಲದಿಂದ ಜನತೆಯ ಆತ್ಮಗಳನ್ನು ಸೆರೆಹಿಡಿಯಬಲ್ಲ ಬಲೆಯನ್ನು ನೇಯಲಾಗಿದೆ ಎಂಬ ತಿಳುವಳಿಕೆ ಇದಕ್ಕೆ ಅಗತ್ಯವೆಂದೂ ಹೇಳಿ, ಕೆಲಸಮಾಡುವ ನೂರಾರು, ಸಾವಿರಾರು ದುಡಿಮೆಗಾರರ ವರ್ಗಸ್ವಭಾವ, ನಡತೆ, ಆಚಾರ, ವ್ಯವಹಾರ, ನಂಬಿಕೆ, ಎಲ್ಲವನ್ನೂ ಒಂದು ಪ್ರಾತಿನಿಧಿಕ ಪಾತ್ರಗಳಲ್ಲಿ ಛಟ್ಟೆ ಇಳಿಸಿದಾಗಲೇ ಲೇಖಕ ಒಂದು type ನಿರ್ಮಿಸುತ್ತಾನೆ, ಅದೇ ಕಲೆ ಎನ್ನುತ್ತಾನೆ. ಈ ಮಾನದಂಡದಿಂದ ನೋಡಿದಾಗ ಸಮಾಜವಾದಿ ಚಳುವಳಿಗಳ ಕಾಲದ ‘ತಾಯಿ’ ಎಲ್ಲ ದೇಶದ ಚಳುವಳಿಗಳ ಭಾಗವೂ ಆಗಬಲ್ಲದು.

ಪಾತ್ರಗಳ ನಿರ್ಮಾಣ, ವಸ್ತುವಿನ ಬೆಳವಣಿಗೆ, ಪೋಷಣೆ, ಬರಹದ ಶೈಲಿಯ ಸ್ವೋಪಜ್ಞತೆ ಗಾರ್ಕಿಯನ್ನು ಶ್ರೇಷ್ಠ ಬರಹಗಾರನೆಂದು ರುಜುವಾತುಗೊಳಿಸಿವೆ. ಪರಿಣಾಮ, ಧೋರಣೆಗಳಲ್ಲಂತೂ ಗಾರ್ಕಿ ಪ್ರಗತಿಶೀಲ, ಅಚ್ಚ ಹೊಸ ಪ್ರಕ್ರಿಯೆ.

○ “ಕ್ರಾಂತಿಯ ಬಿರುಗಾಳಿಯಲ್ಲಿ ಕೈ ಬೀಸಿದ ನನ್ನ ಜನರು” ಹಾಡಿನ ರೂಪದಲ್ಲಿ ಸಾಂಕೇತಿಕವಾಗಿ ಚಿತ್ರಿಸಲ್ಪಟ್ಟ ಮುಖಪುಟವು ಅರ್ಥಪೂರ್ಣ.

○ ಸಮಾಜದ ಏಳ್ಗೆಗಾಗಿ ಯೋಚಿಸುವ, ಜಗತ್ತಿನ ಮಾನವಪ್ರೇಮಿಗಳು ಓದಲೇಬೇಕಾದ ಅಮೂಲ್ಯ ಗ್ರಂಥ ‘ತಾಯಿ’. ತಾಯಿ ಹೋರಾಟದಲ್ಲಿ ತೊಡಗಿದ ಕಾರ್ಮಿಕರ ರೈತರ ಪ್ರತಿನಿಧಿ. ಕ್ರಾಂತಿಕಾರಿಗಳಿಗೆ ಸ್ಫೂರ್ತಿಕೇಂದ್ರವಾದ ಈ ಕೃತಿ ಜಗತ್ತಿನ ಮೊಟ್ಟಮೊದಲ ಸಮಾಜವಾದಿ ಹೋರಾಟದ ಒಂದು ಭಾಗವನ್ನು ಕಲಾತ್ಮಕವಾಗಿ ದಾಖಲುಗೊಳಿಸುತ್ತದೆ.

ಜಗತ್ತಿನಲ್ಲಿ ಮಾನವ ಜನಾಂಗಗಳಲ್ಲಿ ಪ್ರಾರಂಭದಿಂದಲೂ, ಅಸಂಖ್ಯ ಹೋರಾಟಗಳು ನಡೆಯುತ್ತಾ ಬಂದಿವೆ. ಮಾರ್ಕ್ಸ್ ಇಲ್ಲಿವರೆಗಿನ ಲಿಖಿತ ಇತಿಹಾಸವೆಲ್ಲ ವರ್ಗ ಹೋರಾಟದ ಇತಿಹಾಸವೇ ಎಂದರು. ಒಂದು ಮಹೋನ್ನತ ಗುರಿಗಾಗಿ, ವಿಶ್ವಮಾನವನ ಮೌಲಿಕ ಸೃಷ್ಟಿಗಾಗಿ, ಹೊಸ ಜಗತ್ತಿನ ನಿರ್ಮಿತಿಗೆ ನಡೆಯುವ ಹೋರಾಟವೇ ಎಲ್ಲ ಚಾರಿತ್ರಿಕ ಹೋರಾಟಗಳ ತುಟ್ಟತುದಿ. ಅಂಥ ಹೋರಾಟವು ಶೋಷಣೆಗೆ ಒಳಗಾದ ಜನಕೋಟಿಯ ಸಂಕಟವನ್ನೂ ಕೊಚ್ಚಿಹಾಕುವುದು.

ಮಾನವೀಯ ಮೌಲ್ಯಗಳ (ಹೋರಾಟಗಳ ಮಧ್ಯೆ ಅರಳುವ) ಸಾಹಿತ್ಯಿಕ ಪ್ರತಿಪಾದನೆ ಮಾಡಹೊರಟ ತಾಯಿ, ಹೋರಾಟದಿಂದ ಬರುವ ಕಷ್ಟಗಳು, ಹೋರಾಟದಲ್ಲಿ ಭಾಗಿಯಾದವರ ಮನೋಭಾವ, ಪರಿಸ್ಥಿತಿ ಎದುರಿಸಿ ಅದರಿಂದ ಪಾಠ ಕಲಿಯುವ ರೀತಿ, ಆಳುವ ವರ್ಗಗಳ ಕ್ರೂರ ಹಿಂಸೆಗಳನ್ನು ಎದುರಿಸಿ ಎಚ್ಚರಗೊಳ್ಳುವ, ಬೆಳೆವ ಜನತೆ, ಇದೆಲ್ಲಕ್ಕೂ ಸಾಕ್ಷಿಯಾಗಿ, ಮತ್ತು ಅದರಲ್ಲಿ ಭಾಗಿಯಾಗಿ ಬೆಳೆಯುತ್ತ ಬಂದವಳು “ತಾಯಿ”. “ತಾಯಿ” ಕ್ರಾಂತಿಯ ಕಾಲಘಟ್ಟದ ರಶಿಯಾದ ಚಿತ್ರಣಕ್ಕೆ ಒಂದು ಸಣ್ಣ ಗವಾಕ್ಷಿಯಂತಿದ್ದರೂ ಹೊಸ ಯಾಗದ ನಿರ್ಮಾಣದಲ್ಲಿ, ಅದರ ನಿರ್ಮಾಪಕರಾದ ದುಡಿವ ಜನರ ಸಾಧನೆಗಳೆಲ್ಲ ಸಂಯೋಜನೆಗೊಂಡಿವೆ.

ಸ್ಪಾರ್ಟಕಸ್‌ನಂಥ ಅಪರೂಪ ದಾಖಲೆಗಳ ಚರಿತ್ರೆಯ ಈ ಕಾಲಘಟ್ಟದಲ್ಲಿ ಮಾನವನ ಮಹೋನ್ನತ ಪ್ರಜ್ಞೆಯನ್ನೂ, ‘ನಿಜವಾಗಿ’ ದೊರಕಿಸಿಕೊಟ್ಟ ಮಾರ್ಕ್ಸ್‌ನ ನಂತರ ಹುಟ್ಟಿದ ಕಲಾವಿದರು ಜನತೆಯ ಸಾಹಿತ್ಯ ಸೃಷ್ಟಿಸಿದರು. ಅಂಥ ಮಹಾ ಪಾತ್ರ ‘ತಾಯಿ’. ಶೋಷಕರೆ ಹೆಚ್ಚಾಗಿ ಪಾತ್ರವಾಗಿ ಮೆರೆದ ಹಿಂದಿನ ಸಾಹಿತ್ಯ ಚರಿತ್ರೆಯಿರುವಾಗ, ಜನಸಾಮಾನ್ಯರ ಪ್ರಜ್ಞೆಯ ಈ ವೈಜ್ಞಾನಿಕ ಯುಗದಲ್ಲಿ ಅವರೇ ಪಾತ್ರಗಳಾಗಬೇಕಾದದ್ದು ಅನಿವಾರ್ಯತೆ. ತಾಯಿ ಇಂಥ ಅನಿವಾರ್ಯ ಪಾತ್ರ. ಆಕೆ ಹೊಸ ಯುಗದ ಮೌಲಿಕ ಪ್ರಜ್ಞೆಗಳನ್ನು ಹಡೆಯುವ ಮಹಾ ತಾಯಿಯೇ ! ಜಗತ್ತಿನ ಪ್ರಥಮ ಶೋಷಿತೆಯಾದ ಆಕೆ, ವರ್ಗ ಸಮಾಜದಲ್ಲಿ ನಾನಾ ರೂಪದ ಚಿತ್ರಹಿಂಸೆಗಳ ಮಧ್ಯೆಯೂ (ಮೊದಲು ಗಂಡನಿಂದ; ನಂತರ ಪೋಲೀಸರು, ಗೂಢಚಾರರಿಂದ ‘ತಾಯಿ’ ಅನುಭವಿಸುವಳು) ಉನ್ನತ ಮಹಿಳೆಯಾಗಿ ಅರಳಿಕೊಳ್ಳುವಳು. ಕುಟುಂಬದ ಮಿತಿಯಿಂದ, ವಿಶ್ವ ಕುಟುಂಬದ ಪರಿಮಿತಿಗೆ-ಸಂಗಾತಿಗಳ ಒಡನಾಟದಿಂದ, ಆಳವಾದ ಅನುಭವಗಳಿಂದ, ಹೋರಾಟದಲ್ಲಿ ಭಾಗಿಯಾಗುವುದರ ಮೂಲಕ,-ಜಿಗಿಯುತ್ತಾಳೆ. ತನ್ನ ಬಾಳಿನ ಅರ್ಥ ಇಡೀ ಶೋಷಿತ ಜನ ಸಮುದಾಯದ ಬಾಳಿನ ಅರ್ಥವೇ ಆದಾಗ, ಶೋಷಣೆಯ ವಿರುದ್ಧ, ಮಾನವೀಯ ಹೋರಾಟಕ್ಕೆ ಆಕೆ ತೊಡಗಿದಾಗ ಎಂಥ ಅನುಭವ ಪಡೆದಳು ಎಂಬುದನ್ನು ಗಾರ್ಕಿ ಕಲಾತ್ಮಕವಾಗಿ ವಿಶ್ಲೇಷಿಸುತ್ತಾರೆ. ಆಕೆಯ ಬದುಕು ಅರಳುವುದೆಂದರೆ ಚರಿತ್ರೆಯ ಉಜ್ವಲ ಶಿಲ್ಪವಾಗತೊಡಗುವುದು.. ವಿಮೋಚನೆಗಾಗಿ ಹೋರಾಡುತ್ತಿರುವ ಮೂರನೇ ಜಗತ್ತಿನ ರಾಷ್ಟ್ರಗಳ ಮಹಿಳಾ ಪ್ರಪಂಚಕ್ಕೆ ಒಟ್ಟು ಶೋಷಿತ ಜನ ಸಮುದಾಯಕ್ಕೆ ತಾಯಿ ಮುಂಗೋಳಿ ಕೂಗಾಗಿ ಕಾಣುತ್ತಾಳೆ.

ವಿಶ್ವ ಸಾಹಿತಿ, ಬದ್ಧ ಲೇಖಕ, ಗಾರ್ಕಿ ಯಂಥವರು ಮಾತ್ರ ಇಂಥ ಕೃತಿ ರಚನೆ ಮಾಡಲು ಸಾಧ್ಯವಾಗುತ್ತದೆ.

ಕಾದಂಬರಿಯ ಮಹತ್ವವನ್ನು ಜಗತ್ತು ಆಗಲೆ ಗುರುತಿಸಿದೆ. ಜಗತ್ತಿನ 127 ಭಾಷೆಗಳಲ್ಲಿ ಅದು ಮಿಲಿಯಾಂತರ ಪ್ರತಿಗಳೂ ಮಾರಾಟವಾಗಿ ಪ್ರೀತಿಯಿಂದ ಓದಲ್ಪಟ್ಟಿದೆ ಎಂದು ಪುಸ್ತಕದಲ್ಲಿ ಮಾಹಿತಿ ಇದೆ. 1907ರ ಸುಮಾರಿಗೇ 13 ರಾಷ್ಟ್ರಗಳಲ್ಲಿ ಪ್ರಕಟವಾದ ತಾಯಿ, “ಐರೋಪ್ಯ ಶ್ರಮ ಜೀವಿಗಳಿಗೆ ಕೈಪಿಡಿಯಾಯಿತು.” (ಪು. 7) ರಶಿಯಾದ ಚಳುವಳಿಯ ಮಹಾ ನಾಯಕ ಲೆನಿನ್ “ಅತ್ಯಂತ ಸಕಾಲಿಕ ಪುಸ್ತಕ”, “ಅತ್ಯವಶ್ಯಕ ಪುಸ್ತಕ” ಎಂದಿದ್ದರು.

“ಹೋರಾಟದ ಸಮಯದಲ್ಲಿ ಮಾನವನಲ್ಲಾಗುವ ಒಳ ಬದಲಾವಣೆಗಳ ಪ್ರಕ್ರಿಯೆ, ಅದರ ಶುದ್ಧಿಕರಣ ಜ್ವಾಲೆಯಲ್ಲಿ ಮಾನವ ದ್ವಿತೀಯ ಜನ್ಮ ಪಡೆಯುವದು” ಎಂದು ‘ತಾಯಿ’ಯನ್ನು ವಿಮರ್ಶಿಸಿದ (ಮುನ್ನುಡಿಯಿಂದ ಪುಟ 8) ಬ್ಯಾಲಿಕ್ ಬರೆಯುತ್ತಾರೆ. “ಕ್ರಾಂತಿಯು ನಿಜಕ್ಕೂ ಮಾನವೀಯವಾದ ಎಲ್ಲ ಭಾವನೆಗಳನ್ನು, ಅವುಗಳಲ್ಲಿ ಅತ್ಯಂತ ಉದಾತ್ತವಾದ ತಾಯ್ತನ, ಹಾಗೂ ಭ್ರಾತೃತ್ವದ ಭಾವನೆಗಳನ್ನು ಎಚ್ಚರಗೊಳಿಸುತ್ತದೆ” ಎನ್ನುತ್ತಾರೆ (ಪುಟ 10) ಬ್ಯಾಲಿಕ್. ಈ ಹೋರಾಟ ಮಾನವೀಯ ಮೌಲ್ಯಗಳ ಜಾಗತಿಕ ಪ್ರತಿಪಾದನೆಗಾಗಿ ಇರುವುದರಿಂದಲೇ ಹೀಗಾಗುತ್ತದೆಂಬುದನ್ನು ನಾವು ಗಮನಿಸಬೇಕು.

“ಮಾನವನನ್ನು ದಾಸತನಕ್ಕೊಳಪಡಿಸುವ ಬಾಹ್ಯ ಶಕ್ತಿಗಳ ವಿರುದ್ಧ ಹೋರಾಟವಷ್ಟೇ ಆತನ ಅಂತರ್ಯವನ್ನು ಬಿಡುಗಡೆ ಮಾಡಬಲ್ಲದು.” ಅದೂ “ಸಮಾಜವಾದಿ ಉದಾತ್ತ ವಿಚಾರಗಳ ನೈತಿಕ ಸಂಹಿತೆಯ ಮೂಲಕ (ಪುಟ 11). ಕಾದಂಬರಿಯ ಕಲಾತ್ಮಕ ಮೈಕಟ್ಟು, ರೊಮ್ಯಾಂಟಿಕ್ ಶೈಲಿ ಅಂಶಗಳವೆ ಎಂದೂ ಅವು ಕಾದಂಬರಿಯನ್ನು ವಿಶೇಷ ಉನ್ನತವನ್ನುಕ್ಕೆ ಒಯ್ಯುತ್ತವೆ’ ಎಂದೂ ‘ಅದಕ್ಕೆ ವೀರಗಾಥೆ ಅಥವಾ

(6ನೇ ಪುಟವನ್ನು ನೋಡಿ)

‘ತಾಯಿ’—ಕ್ರಾಂತಿಕಾರಿಗಳಿಗೆ ಮಾರ್ಗದರ್ಶಿ

(5ನೇ ಪುಟದಿಂದ)

ಜಾನಪದ ಕಥೆಯೊಂದರ ಮಟ್ಟ ಹಾಗೂ ಮೆರಗು ನೀಡುತ್ತದೆ'' (ಪು. 14) ಎಂದು ಬ್ಯಾಲಿಕ್ ಮಹತ್ವದ ಮಾತು ಹೇಳಿದ್ದಾರೆ. ಜನಪದ ಸಾಹಿತ್ಯದ ಶೈಲಿಯೆ ಅವರನ್ನು ಕುರಿತ (ಜನಪದರು) ಬರಹಗಳ ಮಾದರಿ ಆದೀತು.

ಕಾದಂಬರಿಯ ಮೊದಲಿನ ಎರಡು ಭಾಗಗಳು ಒಂದು ಸ್ವತಂತ್ರ ಕಥೆಯಂತೆ ಇದೆ. ಮೊದಲನೆ ಪುಟದಲ್ಲಿ ‘‘ಕಪ್ಪಾದ ಹೊಗೆ ಕೊಳವೆಗಳು ಬಹಳ ಎತ್ತರದವರೆಗೂ ಹಬ್ಬಿ, ದಪ್ಪನೆಯ, ಬಡಿಗೆಯಂತೆ, ಆ ವಸತಿ ಪ್ರದೇಶದ ಮೇಲೆ ಭಯಾನಕವಾಗಿ ಬಾಗಿ ನೋಡುತ್ತಿದ್ದವು’ ಎಂಬ ವರ್ಣನೆಯಲ್ಲಿ ವರ್ಗ ಸ್ವಭಾವವನ್ನು ಬಿಂಬಿಸುವ ವಿಧಾನ ಗಮನಿಸಬಹುದು. ಜನತೆಯ ಕ್ರಾಂತಿ ಪೂರ್ವ ಪರಿಸ್ಥಿತಿಯಲ್ಲಿ ಅಸಹನೆಯ ದಾರುಣ ಬದುಕಿನ ಚಿತ್ರಣ ಇದೆ. ಈ ಯಾತನಾಮಯ ಕೊಳಕು ಬದುಕಿನ ಮಧ್ಯೆ ಅಂಥದೇ ಬದುಕು ನಡೆಸುತ್ತಿದ್ದ ಪಾವೆಲ್ ಬೇಗನೆ ಪ್ರತ್ಯೇಕಗೊಂಡು, ಹೊಸ ಬಾಳಿನ ಹೋರಾಟಕ್ಕೆ ಸಿದ್ಧನಾಗುತ್ತ, ಬೆಳೆಯುತ್ತ, ಸುತ್ತಲಿನ ಬದುಕನ್ನು ಎಚ್ಚರಗೊಳಿಸುತ್ತ, ಇಡಿ ರಶಿಯಾದ ಆಗಿನ ಪ್ರಜ್ಞಾವಂತ ಹೋರಾಟದ ಜತೆ ತನ್ನನ್ನು ತೊಡಗಿಸಿಕೊಳ್ಳುವನು. ಇದಕ್ಕೆ ತಾಯಿಯೂ ಹೆಜ್ಜೆ ಕೂಡಿಸುವಳು. ಎಲ್ಲದಕ್ಕೂ ಸಾಕ್ಷಿಪ್ರಜ್ಞೆಯಾಗುವಳು, ಇದೆಲ್ಲದರ ವಿವರಗಳು ಕಾದಂಬರಿಯ ವಸ್ತು.

ಮುಂದಿನ ಮುದ್ರಣದಲ್ಲ ತಿದ್ದಿಕೊಳ್ಳಬೇಕಾಗುವ ಈ ಹಲವು ಪ್ರಿಂಟ್ ದೋಷಗಳು—31ನೇ ಪುಟ ಹಚ್ಚಿ (ಚ್ಚ)ದ; 94 ಯುಂಚಾ (ಟಾ) ಯಿತು: 125 ಬಿಟ್ಟಿ (ಟ್ಟ)ಡ್ತಾರೆ; 303 ಶ್ರದ್ದೆ (ದ್ಧೆ); 323 ಅತ (ಆ); 284 ಮನಗ (ಮಗನ); 373 ಮಲಗೀ (ಗಿ); 446 ಹೇಪು (ಪ್ಪು)

ಕಾದಂಬರಿಯ ಅನೇಕ ಪ್ರಸಂಗಗಳಲ್ಲಿ ಬರುವ ಹಲವು ಮಾತುಗಳ ಮೇಲೆ ಕಣ್ಣಾಡಿಸಿದರೆಯೂ ಲೇಖನ ಪ್ರೇರಣೆ ಕಲೆಗಾರಿಕೆಯ ಕಲ್ಪನೆ ಬರುತ್ತದೆ,

—ಉದಾ—

ತಾಯಿ ಬಗ್ಗೆ :

‘‘ತನ್ನ ಬಗೆಗೆ, ತನ್ನ ಜೀವನದ ಬಗೆಗೆ, ಯಾರಾದರೂ ಮಾತಾಡಿದ್ದನ್ನು ಆಕೆ ಕೇಳಿದ್ದು ಅದೇ ಮೊದಲಸಲ''—37, ಪುಟ. ತಾಯಿ ಹೇಳುತ್ತಾಳೆ ‘‘ಹೆದರದೇ ಹೇಗಿರಲಿ ನಾನು ? ಇಡೀ ಜೀವಮಾನವೆಲ್ಲಾ ಹೆದರಿಕೆಯಲ್ಲೇ ಕಳೆದೆ'' (41); ಪೋಲಿಸರಿಗೆ ಆಕೆ ಹೇಳುತ್ತಾಳೆ ‘‘ಒಬ್ಬ ತಾಯಿಯ ಹತ್ತಿರ ಸಾಕಷ್ಟು ಕಣ್ಣೀರು ಇರುತ್ತಪ್ಪಾ, ಪ್ರತಿಯೊಂದು ಸಮಯಕ್ಕೂ — ಪ್ರತಿಯೊಂದಕ್ಕೂ'' (79); “ಆದರೆ ಮಗನ ನಾಸ್ತಿಕತೆಯ ಹಿನ್ನೆಲೆಯಲ್ಲಿ . ಒಂದು ಶ್ರದ್ಧೆ ಇದೆಯೆಂದು ಆಕೆಗೆ ಅನಿಸುತ್ತಿತ್ತು'' (85); ಪೋಲಿಸರ ಬಗ್ಗೆ “ಈ ಬೂದು ಬಣ್ಣದ ನಿಶಾಚರ ಅತಿಥಿಗಳ ಬಗ್ಗೆ ಆಕೆಗೆ ದ್ವೇಷ ಹೆಚ್ಚಿತ್ತು ಈ ದ್ವೇಷದೆದುರಲ್ಲಿ ಆಕೆಯ ಹೆದರಿಕೆಯೆಲ್ಲ ನಶಿಸಿಹೋಗಿತ್ತು.” (101); “ಎಳೇ ಹುಡುಗೀರು ಶಹರದಿಂದ ಐದು ಮೈಲಿ ನಡೆದು ಬರ್‍ತಾರೆ, ಕೆಸರಿನಲ್ಲಿ ಮಳೆಯಲ್ಲಿ ಅವರನ್ನೂ ಪ್ರೇರೇಪಿಸೋದು ಯಾರು? ಅವರು ಯಾಕೆ ಹಾಗೆ ಮಾಡ್ತಾರೆ ? ಶುದ್ಧವಾದ ಮಹಾಪ್ರೇಮ ಅದರಲ್ಲಿ ಇರೋದರಿಂದಲೇ ಹಾಗೆ ಮಾಡ್ತಾರೆ” (127); ಹೊಹೋಲ್ ತಾಯಿಗೆ ಹೇಳುತ್ತಾನೆ “ನಿಮ್ಮಲ್ಲಿ ಮಹಾ ಮಾತೃ ಪ್ರೇಮವಿದೆಯಮ್ಮ, ಆದ್ದರಿಂದ ನೀವೂ ದೊಡ್ಡ ದೊಡ್ಡ ಕೆಲಸಗಳನ್ನು ಮಾಡಬಲ್ಲಿರಿ” (128); ತಾಯಿ ಮನಸ್ಸು- “ಈಗ ಜೀವಿಸೋದು ನನಗೆ ಸುಲಭವಾಗ್ತಿದೆ, ನಾನಿರೋ ರೀತಿ ಸ್ವಲ್ಪಸ್ವಲ್ಪವಾಗಿ ಸ್ಪಷ್ಟವಾಗಿ ಕಾಣ್ತಿದೆ” (129); ಅಂದ್ರೇಯ್ ತಾಯಿಗೆ “ಅಳಬೇಡಿ, ನಿಮ್ಮ ಜೀವನ ಸರಿಪಡಿಸೋದು ನಿಮ್ಮ ಕೈಲಿತ್ತೆ ? ಆದೆಷ್ಟು ಹೊಲಸೆದ್ದಿತ್ತು ಅನ್ನೋದನ್ನಾದರೂ ಸದ್ಯ ತಿಳಕೊಂಡಿದೀರಾ?.... ಮನುಷ್ಯನ ಮನಸ್ಸಿನ ಸುತ್ತೂ ಇರೋ ಸಂಕೋಲೇನ ತಡಿಯೋಕೆ ಪ್ರಯತ್ನಿಸುವವರು ಮಾತ್ರ ನಿಜವಾದ ಮಾನವರು'' (134); “ಬೆಲೆಗಳು ಏರ್‍ತಾನೆ ಇವೆ, ಅದಕ್ಕೆ ತಕ್ಕ. ಹಾಗೆ ಜನರೂ ಅಗ್ಗವಾಗ್ತಾ ಇದ್ದಾರೆ'' (144) “ಯಾರಿಗಾದರೂ ತನ್ನ ಅವಶ್ಯಕತೆ ಇತ್ತೆಂದು ಹಿಂದೆಂದು ಆಕೆ ಭಾವಿಸಿರಲಿಲ್ಲ. ಆದರೆ ಈಗ ಬಹಳ ಜನರಿಗೆ ತಾನು ಬೇಕಾದವಳೆಂಬುದು ಸ್ಪಷ್ಟವಾಗಿ ಅವಳಿಗೆ (ತಾಯಿಗೆ) ಕಾಣಿಸುತ್ತಿತ್ತು.” (157) ಅಂದ್ರೆಯ್ ತಾಯಿಗೆ “ಜನಸಾಮಾನ್ಯರನ್ನು ಅಳಿಸಿ ಹೊರಡಿಸಿರೋ ಕಣ್ಣೀರಿನ ಸಮುದ್ರದಲ್ಲಿ ಬಂಡವಾಳಶಾಹಿಯ ಪ್ರತಿಯೊಂದು ರಕ್ತಬಿಂದುವೂ ಯಾವಾಗಲೋ ತೊಳೆದು ಹೋಗುತ್ತೆ” (160); ತಾಯಿ-ಮಗ ಇಬ್ಬರೂ ಒಂದೇ ಧ್ಯೇಯದವರೊಂತ ಹೇಳಿಕೊಳ್ಳೋದು ಒಂದು ಅಪೂರ್ವ ಸುಖ” (161);

ಪಾವೆಲ್ “ಮುಗುಳ್ನಗುತ್ತ ಮಕ್ಕಳನ್ನು ಸಾವಿಗೆ ಕಳುಹಿಸುವ ತಾಯಂದಿರು ಯಾವತ್ತು ದೊರೆತಾರು ನಮಗೆ?” (169) ಇದಕ್ಕೆ ಉತ್ತರವಾಗಿ ತಾಯಿ ‘‘ಸಾವೇನೂ ಅಡ್ಡಿಯಾಗೋದಿಲ್ಲ... ಸಹಿಸೋದು ಕಷ್ಟ ತಾಯಿ ಅನ್ನೋದನ್ನ ಹ್ಯಾಗೆ ಮರೀಲಿ”, ಪಾವೆಲ್ “ಕುತ್ತಿಗೆಗೆ ಕೊರಡಾಗಿರೋ ಪ್ರೇಮವಾಗಲೀ ಸ್ನೇಹವಾಗಲೀ ನನಗೆ ಬೇಡ” (171); “ನಾನು ಸಾಯೋಕೆ ಮುಂಚೆಯೊಮ್ಮೆ ಸತ್ಯದ ಜತೇಲಿ ಮೆರವಣಿಗೆ ಹೋಗೋದು ಬೇಡವಾ ?”--ತಾಯಿ (207); “ಅದೇ ದಿನ ಪೋಲಿಸರು ಬಂದರು ಆಶ್ಚರ್ಯ, ಭಯ ಒಂದೂ ಇಲ್ಲದೆ ಅವರನ್ನಾಕೆ (ತಾಯಿ) ಇದಿರುಗೊಂಡಳು.” (230); ತಾಯಿ “ನಮ್ಮ ಮಕ್ಕಳೇ ನಮ್ಮ ನ್ಯಾಯಾಧೀಶರು.”, ತಾಯಿ “ಹಿಂದೆ ಯಾರ ಮುಂದಾದರೂ ಹೃದಯದಲ್ಲಿರೋದನ್ನ ಹೇಳೋದಕ್ಕೆ ಬಹಳ ಕಾಲಿಹಿಡೀತಿತ್ತೂ ಈಗ ಸದಾ ಹೃದಯ ತೆರೆದೇ.''(245); “ಆಕೆಯ ದೃಷ್ಟಿಯಲ್ಲಿ, ಮಗನ ಆಕೃತಿ, ಅದೇ ಸ್ಥಿತಿಯಲ್ಲಿದ್ದ ಎಲ್ಲರನ್ನೂ ಅಪ್ಪಿಕೊಳ್ಳುವವರೆಗೆ ಬೆಳೆಯುತ್ತಿತ್ತು'' (279); ತನಗೆ ಗೊತ್ತಾಗದಂತೆಯೆ ತಾಯಿ ಪ್ರಾರ್ಥನೆಯನ್ನು ಕಡಮೆ ಮಾಡಿದಳು'' (287); ತಾನೀಗ ಹಿಂದಿನ ಹೆಂಗಸು ಅಲ್ಲವೇ ಅಲ್ಲವೆಂದು ತಾಯಿಗೆ ತೋರಿತು.'' (438); “ನಮ್ಮ ಮಕ್ಕಳು ಭೂಮಿಯ ಮೇಲೆ ಮುಂದಕ್ಕೆ ನಡೀತಿದ್ದಾರೆ... ಒಂದೇ ಗುರಿಯ ಕಡೆಗೆ, ಹೃದಯದಲ್ಲಿ ಅತ್ಯಂತ ಪರಿಶುದ್ಧರು.... ದುಷ್ಟ ಶಕ್ತಿಗಿದಿರಾಗಿ ನಿರ್ಭೀತರಾಗಿ...'' (444) “ನಮ್ಮ ಮಕ್ಕಳು ಸತ್ಯದ ವಿಚಾರದ ಹಾದಿ ತುಳಿತಿದ್ದಾರೆ ಮಾನವರ ಹೃದಯಗಳಿಗೆ ಪ್ರೇಮವನ್ನು ತರ್‍ತಿದಾರೆ'' (ಅದೇ).

ಪಾವೆಲ್

“ಜೈಲಿಗೆ ಸೇರಿಸ್ತಾರೆ—ಸತ್ಯ ತಿಳಿಯಬೇಕಂತೀನಲ್ಲಾ ಅದಕ್ಕೆ'' (35); “ಮೊದಲು ಕಲಿಯೋದು ಆಮೇಲೆ ಬೇರೆಯವರಿಗೆ ಕಲಿಸೋದು'' (37); “ಜನರು ಕೆಟ್ಟವರು, ಆದರೆ ಪ್ರಪಂಚದಲ್ಲಿ ನ್ಯಾಯ ಅನ್ಯಾಯ ಒಂದಿದೆ ಎಂತ ನಾನು ತಿಳಿದಾಗ, ಜನ ಹಿಳ್ಳೆಯವರ ಹಾಗೆ ಕಂಡರು'' (39); “ನಮ್ಮನ್ನು ಹಾಳು ಮಾಡಿರೋದು ಈ ಹೆದರಿಕೆಯೇ ನಮ್ಮ ಮೇಲೆ ದರ್ಬಾರು ಮಾಡುವವರು ಈ ಹೆದರಿಕೆಯಿಂದ ಲಾಭ ಪಡೀತಾರೆ. ನಮ್ಮನ್ನು ಇನ್ನೂ ಜಾಸ್ತಿ ಹೆದರಿಸ್ತಾನೇ ಇರ್‍ತಾರೆ” (41); ನತಾಷ ಹೇಳುತ್ತಾಳೆ “ಪ್ರತಿಯೊಂದು ವಿಷಯಕ್ಕೂ ನಿಜವಾದ ಪ್ರಾಮಾಣಿಕವಾದ ಉತ್ತರ ನಮಗೆ ದೊರೆಯಲೇಬೇಕು” (51), “ನಾವೇನೂ ತಪ್ಪು ಮಾಡ್ತಾ ಇಲ್ಲ, ಆದರೂ ಒಂದಲ್ಲ ಒಂದು ದಿನ ಸೆರೆಮನೆವಾಸ ನಮಗೆ ಕಟ್ಟಿಟ್ಟದ್ದೇ (53);

‘‘ನಮಗೆ ಸಂಗಡಗಳ ಹಾಗೂ ರಾಷ್ಟ್ರಗಳ ಭೇದವಿಲ್ಲ. ಇರುವವರು ಸಂಗಾತಿಗಳು ಮತ್ತು ವೈರಿಗಳು ಮಾತ್ರ.'' (60); “ನೋವಾಗೋದನ್ನು ಗಮನಿಸ್ತಾ ಹೋದರೆ ಕೆಲಸಕ್ಕೆ ತಡೆಯಾಗ್ತದೆ.'' (72) ‘‘ಅವರು ವ್ಯಕ್ತಿತ್ವವನ್ನೇ ಮುರೀತಾರಮ್ಮ. ವ್ಯಕ್ತಿತ್ವದ ಮೇಲೆ ಅವರು ತಮ್ಮ ಕೊಳಕು ಕೈ ಇಟ್ಟಾಗ ಎಲ್ಲದಕ್ಕಿಂತ ಹೆಚ್ಚು ನೋವಾಗುತ್ತೆ...'' (81); “ಜನರು ಬರೇ ಮಾತುಗಳಿಗೆ ಕಿವಿಕೊಡೋದಿಲ್ಲ. ಅವರು ಅನುಭವಿಸ್ಬೇಕು, ನಿನ್ನ ಮಾತಗಳನ್ನ ರಕ್ತದಲ್ಲಿ ತೋಯಿಸ್ಬೇಕು.'' (100); ‘‘ನಮ್ಮಂಥ ಬಂಡಾಯಗಾರರ ವಿಷಯದಲ್ಲೆಲ್ಲ ಕನಿಕರ ತೋರಿಸೋಕೆ ಶುರು ಮಾಡಿದರೆ ನಿಮ್ಮ ಹೃದಯವೇ ಬಿರಿದೀತು.'' (119); ‘‘ನನ್ನ ಸಂಗಾತಿಗಳಿಗೋಸ್ಕರ ಮಹಾ, ಧ್ಯೇಯಕ್ಕೋಸ್ಕರ ಏನು ಬೇಕಾದರೂ ಮಾಡಬಲ್ಲೆ- ನನ್ನ ಮಗನನ್ನೂ ಬೇಕಾದರೆ ಕೊಲ್ಲಬಲ್ಲೆ.'' (179); ‘‘ಅವರ ರಕ್ತದಿಂದ ಚಿಕ್ಕಾಸಿನ ಪ್ರಯೋಜನವೂ ಇಲ್ಲಾಂತ ನನಗೆ ಗೊತ್ತಿದೆ. ಅದು ಬರಡಾದ ನಿಷ್ಫಲವಾದ ರಕ್ತ. ನಮ್ಮದಾದರೆ ಚೆಲ್ಲಿ ಹೋದಾಗ ಅದರಿಂದ ಸತ್ಯ ಹುಟುತ್ತೆ.'' (180); ಮನುಷ್ಯರನ್ನ, ಬಂದೂಕು, ದೊಣ್ಣೆ, ಕಲ್ಲುಗಳಾಗಿ ಮಾರ್ಪಡಿಸಿ ‘ಇದು ಸರಕಾರ’ ಅಂತಾರೆ” (185); ‘‘ಅವರು ಆತ್ಮಗಳ ಕೊಲೆಗಡುಕರು.’ ಜನರನ್ನ ಕೊಲೆ ಮಾಡಿ ಅವರ ಆತ್ಮಗಳನ್ನ ಊನ ಮಾಡೋವಾಗ ಅವರು ರಕ್ಷಿಸ್ತಿರೋದು ತಮ್ಮ ಪ್ರಾಣವನ್ನಲ್ಲ. ಅವರು ಅಂತ ಕೃತ್ಯ ಮಾಡೋದು ನಮಗೋಸ್ಕರ ಅಲ್ಲ–ತಮ್ಮ ಆಸ್ತಿ ಐಶ್ವರ್ಯಕ್ಕೋಸ್ಕರ.'' (185); ‘‘ಸಾವಿನಿಂದ ಸಾವನ್ನೇ ಜಯಿಸುತ್ತೇವೆ....ಸುಲಭವಾಗಿ ನಗು ನಗ್ತಾ ಸಾಯೋದು-ಜನರ ಪುನರ್ಜನ್ಮಕ್ಕಾಗಿ! ಜನರ ಜಾಗೃತಿಗಾಗಿ'' (191); ‘‘ನೀವು ನಡಿಸ್ತಿರೋದು ಅಪಾಯದ ಕಷ್ಟದ ಜೀವನ. ಆದರೂ ನಿಮ್ಮ ಹೃದಯ ಯಾವಾಗಲೂ ಮುಗುಳ್ನಗ್ತಾನೇ ಇರ್‍ತದೆ.'' ಸೊಫೀಯ- ‘‘ನಾವು ಜಯಿಸೋದು ಖಂಡಿತ. ಯಾಕೆಂದರೆ ನಾವು ಕೂಲಿಕಾರರ ಜತೆ ಸೇರಿದ್ದೇವೆ''; ತಾಯಿ ಕೇಳುತ್ತಾಳೆ- ‘ನಿಮ್ಮ ಈ ಪ್ರಯತ್ನಕ್ಕೆಲ್ಲ ಯಾರು ಪ್ರತಿಫಲ ಕೊಡ್ತಾರೆ ?’ ಸೋಫಿಯ ಉತ್ತರ-‘ನಮಗೆ ಈಗಾಗಲೇ ಪ್ರತಿಫಲ ಸಿಕ್ಕಿದೆ. ನಮಗೆತೃಪ್ತಿ ಕೊಡುವಂತ ಬದುಕನ್ನು ನಾವು ಕಂಡುಕೊಂಡಿದ್ದೇವೆ. ಪೂರ್ಣ ಅಂತಃ ಸ್ಫೂರ್ತಿಯಿಂದ ನಾವು ಬದುಕಿದೇವೆ.’ (256); “ಅವರು ನಮಗೆ, ಜನಕ್ಕೆ ಯಾಕೆ ಹಿಂಸೆ ಕೊಡ್ತಾರೆ ? ತಮಾಷೆಗಾಗಿ; ತಮ್ಮ ಸಂತೋಷಕ್ಕೋಸ್ಕರ.’ (271); ‘ನಮ್ಮ ಒಡೆಯರಾಗಿರೋ ನೀವೆಲ್ಲ ನಮಗಿಂತಲೂ ಹೆಚ್ಚಿನ ಗುಲಾಮರು. ನೀವು ಮಾನಸಿಕವಾಗಿ ಬಂಧಿತರಾಗಿದ್ದೀರಿ-ನಾವು ಶಾರೀರಿಕವಾಗಿ ಮಾತ್ರ’ (414); ರಕ್ತಾಕ್ಷರಗಳಿಂದ ಇಂಥ ಅಮೂಲ್ಯ ಅನುಭವದ ರಸಘಟ್ಟಗಳನ್ನು, ಮಾರ್ಗದರ್ಶಕ ಸೂತ್ರಗಳನ್ನು ಕಾದಂಬರಿಯುದ್ದಕ್ಕೂ, ಕಾಣುತ್ತೇವೆ.

ಒಬ್ಬ ಕ್ರಾಂತಿಕಾರಿ ಲೇಖಕ, ಚಳುವಳಿಗಳ ಜತೆ, ಹೀಗೆಲ್ಲ ನೇರ ಸಂಪರ್ಕ ಇಟ್ಟುಕೊಂಡು, ತನ್ನ ಸೃಜನಶೀಲತೆಯನ್ನು ಮಹೋನ್ನತ ಕಲಾಸಿದ್ಧಿಗೆ ಬಳಸಿಕೊಳ್ಳಬಲ್ಲ ಎಂಬುದರ ವಿವರ ಚಿತ್ರ ಕೊಡುವ ಹಿನ್ನುಡಿ, ಮುನ್ನುಡಿಗಳು ತುಂಬ ಉಪಯುಕ್ತವಾಗಿವೆ. ಇದು ಒಬ್ಬ ಲೇಖಕನ ಸಾಹಿತ್ಯಿಕ ಸೃಷ್ಟಿಗೆ ಜವಾಬ್ದಾರಿಯನ್ನು, ಒಳಗೊಳ್ಳುವಿಕೆ, ಬದ್ಧತೆಯನ್ನೂ ಸೂಚಿಸುತ್ತೆ.

ತಾಯಿ ಪ್ರಕಟನೆ ಮಾಸ್ಕೋದ ಪ್ರಗತಿ ಪ್ರಕಾಶನದಿಂದ. ಕನ್ನಡ ನಾಡಿನಲ್ಲಿ ಇಷ್ಟು ಅಚ್ಚುಕಟ್ಟಾಗಿ, ಇಷ್ಟು ಕಡಮೆ ಬೆಲೆಯಲ್ಲಿ ಇಂಥ ಸುಂದರ ಗ್ರಂಥ ಒದಗಿಸುವ ಸಾಧ್ಯತೆ ಈ ವ್ಯವಸ್ಥೆಯಲ್ಲಂತೂ ಸಾಧ್ಯವಿಲ್ಲದ ಮಾತು. ಮಾಸ್ಕೋ ಈ ರೀತಿ ಕನ್ನಡದಲ್ಲಿ ತಲುಪುತ್ತಿರುವುದರ ಬಗ್ಗೆ ಕನ್ನಡ ಓದುಗ ಅಚ್ಚರಿ ಪಡುವನು. ಆದರೆ ಇದೆಲ್ಲ ಅಲ್ಲಿ ಯಾಕೆ ಸಾಧ್ಯವಾಗುತ್ತಿದೆ ಎಂದು ಆತ ಯೋಚಿಸುವ ಕಾಲ ಬಂದಿದೆ.

ನಿರಂಜನರ ಅನುವಾದ ಅದ್ಭುತವಾಗಿದೆ. ಗಾರ್ಕಿಯನ್ನು, ಜಗತ್ತಿನ ಪ್ರಗತಿಶೀಲ ಲೇಖಕರನ್ನೂ ಕನ್ನಡಿಗರಿಗೆ ಪರಿಚಯಿಸುತ್ತ ಬಂದ, ಪರಿಚಯಿಸುತ್ತಿರುವ ಗುರುತರ ಹೊಣೆ ಹೊರುತ್ತ ಬಂದ ಸಮರ್ಥ ಲೇಖಕ ಅವರು.

ರಷ್ಯದ ತಾಯಿ, ಜರ್ಮನ್ ನಾಟಕಕಾರ ಬ್ರೆಕ್ಟ್ ಮೂಲಕ. ಸಮುದಾಯದಿಂದ ಕನ್ನಡ ನಾಟಕವಾಗಿ (ಅನು. ಸಿ. ವೀರಣ್ಣ) ಈ ಹಿಂದೆ-ರಂಗದಲ್ಲಿ ಬಂದಾಗ, ಬೆಂಗಳೂರು ಜನ ಅತ್ಯದ್ಭುತವಾಗಿ ಪ್ರತಿಕ್ರಿಯಿಸಿದ್ದಾರೆ. ಎಲ್ಲ ದೇಶಗಳ, ಎಲ್ಲ ದುಡಿವ ಜನಗಳ ಪ್ರಾತಿನಿಧಿಕ ಬರಹವಾದ ಅದು ಬಹು ಮಹತ್ವದ ಪರಿಣಾಮ ಬೀರಲೇಬೇಕು. ಅದು ಸರ್ವಕಾಲಿಕ ಚಿರಂತನ ದಾಖಲೆಯಾಗುಳಿಯಬಲ್ಲದು.

ಮಹಿಳೆ, ಜಗತ್ತಿನ ಪ್ರಥಮ ಶೋಷಿತೆ ಎಂದ ಆಗಸ್ಟ ಬೆಬೆಲ್. ಶೋಷಣೆಯ ಜಗತ್ತಿನ ವಿಮೋಚನೆಗಾಗಿ ಹೋರಾಡುವ ಪ್ರಥಮ ಜವಾಬ್ದಾರಿ, ಹಕ್ಕು, ಅನಿವಾರ್ಯತೆ, ಆಕೆಗೆ ಇರೋದು ಎನ್ನುವುದದರ ಅರ್ಥವೂ ಇದು. ಅಂಥ ಹೋರಾಟಗಳ ಖಚಿತ ದಿಕ್ಕಿಗೆ ಒಂದು ಮಾರ್ಗಸ್ತುತಿ ‘‘ತಾಯಿ.'' ●

ಪುತ್ತೂರು :

ಪ್ರತಿಭಟನಾ ದಿನಾಚರಣೆ

ಪ್ರಾಂತ ರೈತ ಸಂಘದ ಕರೆಯ ಮೇರೆಗೆ ದ. ಕ. ಜಿಲ್ಲೆಯ ಪುತ್ತೂರಿನ ತಹಸೀಲ್ದಾರ್ ಕಛೇರಿ ಎದುರು ರೈತ ಸಂಘದ ಆಶ್ರಯದಲ್ಲಿ ಧರಣಿ ಸತ್ಯಾಗ್ರಹ ನಡೆಯಿತು. ಆರಂಭದಲ್ಲಿ ನಗರದಾದ್ಯಂತ ಮೆರವಣಿಗೆ ಹೊರಡಿಸಲಾಗಿತ್ತು.

ಸಾಯಂಕಾಲ ನಡೆದ ಬಹಿರಂಗಸಭೆನ್ನುದ್ದೇಶಿಸಿ ಕಾಂ। ಪರಮೇಶ್ವರ ನಂಬೀಶನ್, ವಿ. ವಿ. ಜೋಸ್, ಬಿ. ರಾಮಕೃಷ್ಣ, ತೆಂಬನ್, ವಿಲ್ಫ್ರೆಡ್ ಡಿಸೋಜ ಮೊದಲಾದವರು ಮಾತನಾಡಿದರು.

ಸಂತಾಪ

ಬೆಂಗಳೂರಿನ ಐ ಟಿ ಐ ಕಾರ್ಖಾನೆಯಲ್ಲಿ ಕೆಲಸ ಮಾಡುತ್ತಿದ್ದ ಕಾಂ। ಆರ್ಮುಗಂ ಅವರು 14-4-82 ರಂದು ಹೃದಯಾಘಾತದಿಂದ ನಿಧನರಾದ ದುಃಖಕರ ವಾರ್ತೆಬಂದಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹಿತೈಷಿಯಾಗಿದ್ದ ಕಾಂ। ಆರ್ಮುಗಂ ಟಿ ಯು ಸಿ ಸಿ ಯ ಸಕ್ರಿಯ ಸದಸ್ಯರಾಗಿದ್ದರು.

ಕೃಷ್ಣರಾಜಪುರದ ಪಾರ್ಟಿ ಶಾಖೆಯು ಕಾಂ। ಆರ್ಮುಗಂ ನಿಧನಕ್ಕೆ ಸಂತಾಪ ವ್ಯಕ್ತಪಡಿಸಿದೆ.

ಮೈಸೂರಿನಲ್ಲಿ

(2ನೇ ಪುಟದಿಂದ)

ಕಾಂ। ಮೋಹನ್ ಕುಮಾರ್‌ರವರ ಮೇಲೆ ವಿನಾಕಾರಣ ಪೋಲಿಸರು ನಡೆಸಿದ ದೌರ್ಜನ್ಯದಿಂದ ಕಾರ್ಮಿಕರು ಕುಪಿತರಾಗಿದ್ದಾರೆ. ಈ ದೌರ್ಜನ್ಯವನ್ನು ತೀವ್ರವಾಗಿ ಪ್ರತಿಭಟಿಸಿದ್ದಾರೆ. ವಿನಾಕಾರಣ ತಮ್ಮನ್ನು ಬಂಧಿಸಿ, ಅಮಾನುಷವಾಗಿ ಥಳಿಸಿ ಸುಳ್ಳು ಕೇಸನ್ನು ಹಾಕಿರುವ ಪೋಲಿಸ್ ಅಧಿಕಾರಿಗಳ ಕ್ರಮವನ್ನು ಕಾಂ।ಮೋಹನ್‌ಕುಮಾರ್ ಪ್ರಶ್ನಿಸಿ ಕೋರ್ಟಿನಲ್ಲಿ ದಾವೆ ಹೂಡಿದ್ದಾರೆ.

ಮೈಸೂರಿನಲ್ಲಿ ಕಾರ್ಮಿಕರ ಮೇಲೆ ಹಾಗೂ ಅವರ ಮುಖಂಡರ ಮೇಲೆ ಪೋಲಿಸ್ ದೌರ್ಜನ್ಯಗಳು ದಿನೇ ದಿನೇ ಹೆಚ್ಚಾಗುತ್ತಿವೆ. ಮೇಲಿನ ಘಟನೆ ನಡೆದ ಒಂದೆರಡು ದಿನಗಳ ನಂತರ ನಗರದ ದಾಸ್‌ಪ್ರಕಾಶ್ ಹೋಟೆಲ್‌ನಲ್ಲಿ ಕೆಲಸ ಮಾಡುತ್ತಿರುವ ತಾತ್ಕಾಲಿಕ ಕೆಲಸಗಾರರ ವಾಸದ ಕೋಣೆಗೆ ರಾತ್ರಿ ವೇಳೆಯಲ್ಲಿ ಪೋಲಿಸರು ನುಗ್ಗಿ ಲಾಠಿ ಚಾರ್ಜ್ ನಡೆಸಿರುತ್ತಾರೆ. ಮಲಗಿದ್ದವರಿಗೂ ಅಮಾನುಷವಾಗಿ ಥಳಿಸಲಾಗಿದೆ. ಈ ಹಿಂದೆ ಜನವರಿ 19 ರ ಕಾರ್ಮಿಕರ ಚಾರಿತ್ರಿಕ ಹೋರಾಟದ ಸಂದರ್ಭದಲ್ಲೂ ಮೈಸೂರಿನ ಪೋಲಿಸರು ತೀರಾ ಕ್ರೂರವಾಗಿ ವರ್ತಿಸಿರುವುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಪೋಲಿಸರು ಮತ್ತು ಅವರ ಮೇಲಧಿಕಾರಿಗಳು ಕಾರ್ಮಿಕ ವಿರೋಧಿ ಧೋರಣೆಯನ್ನು ಕೈಬಿಟ್ಟು ತಮ್ಮ ನಡತೆಯನ್ನು ತಿದ್ದಿಕೊಳ್ಳದಿದ್ದಲ್ಲಿ ಹೋರಾಟದ ಮೂಲಕ ಅವರುಗಳಿಗೆ ಪಾಠ ಕಲಿಸಬೇಕಾಗಬಹುದೆಂದು ಇಲ್ಲಿನ ಕಾರ್ಮಿಕರು ನಿರ್ಧಾರಾತ್ಮಕವಾಗಿ ಮಾತನಾಡಿಕೊಳ್ಳುತ್ತಿದ್ದಾರೆ. ಪೋಲಿಸರು ತಾವೂ ಮನುಷ್ಯರೆಂಬುವುದನ್ನು ಕೂಡಲೇ ಅರಿತುಕೊಳ್ಳುವುದು ಒಳ್ಳೆಯದು.

ದಲಿತರ ಹೋರಾಟಕ್ಕೆ ಬೆಂಬಲ

14-4-82 ರಂದು ಡಾ॥ ಅಂಬೇಡ್ಕರ್ ಜಯಂತಿಯನ್ನು ದಲಿತ ಸಂಘರ್ಷ ಸಮಿತಿ ಮತ್ತು ಬಂಡಾಯ ಸಾಹಿತ್ಯ ಸಂಘಟನೆಗಳು ಜಂಟಿಯಾಗಿ ದಲಿತರ ಮೇಲಿನ ದೌರ್ಜನ್ಯ ವಿರೋಧಿ ದಿನವನ್ನಾಗಿ ಆಚರಿಸಿದವು. ಮೈಸೂರಿನ ಬಸ್ ನಿಲ್ದಾಣದ ಬಳಿಯ ತಾತಯ್ಯ ಪ್ರತಿಮೆ ಬಳಿ ಬೆಳಿಗ್ಗಿನಿಂದ ಸಂಜೆಯವರೆಗೆ ಧರಣಿ ಸತ್ಯಾಗ್ರಹ ನಡೆಸಲಾಯಿತು.

ಎಸ್. ಎಫ್. ಐ, ಡಿ. ವೈ. ಎಫ್. ಐ, ಎಲ್. ಐ. ಸಿ, ಸಿ. ಐ. ಟಿ. ಯು. ಮತ್ತು ಹೋಟೆಲು ಕಾರ್ಮಿಕರ ಸಂಘದ ಮುಖಂಡರುಗಳು ಈ ಧರಣಿ ಸತ್ಯಾಗ್ರಹದಲ್ಲಿ ಭಾಗವಹಿಸಿ ದಲಿತರ ಹೊರಾಟಕ್ಕೆ ಬೆಂಬಲ ಸೂಚಿಸಿದರು.

ಬೆಲ್ಚಿ, ಸಾಧುಪುರ, ದೇವೋಲಿ... ಹೀಗೆ ಬೆಳೆಯುತ್ತಿದೆ ದಲಿತರ ಮೇಲಿನ ದೌರ್ಜನ್ಯದ ಸರಮಾಲೆ. ಈ ವಿಷಯ ಸಮಾಜ ವ್ಯವಸ್ಥೆಯಲ್ಲಿ ಬರುವ ದಾಳಿಗಳು, ದಲಿತರ ಮೇಲಿನ ಅತ್ಯಾಚಾರ, ದೌರ್ಜನ್ಯಗಳನ್ನು ಕಡಿಮೆಯಾಗಿಸುವ ಯಾವ ಭರವಸೆಯನ್ನು ನೀಡದಿರಲು, ದಲಿತರು ಸಂಘಟಿತರಾಗಿ ಹೊಸ ಸಮಾಜ ವ್ಯವಸ್ಥೆಗಾಗಿ ಹೊರಾಟ ನಡೆಸುತ್ತಿದ್ದು ಮೈಸೂರಿನಲ್ಲಿ ಪ್ರತಿಭಟನಾ ಧ್ವನಿ ಮೊಳಗಿತು.

ಕೇರಳದ ಮತದಾರರಿಗೆ ಪಾಲಿಟ್‌ಬ್ಯೂರೋ ಮನವಿ

ರಾಜ್ಯದ ವಿಧಾನ ಸಭೆಗೆ ನಡೆಯಲಿರುವ ಚುನಾವಣೆಗಳಲ್ಲಿ ಕಾಂಗ್ರೇಸ್(ಐ) ನೇತೃತ್ವದ ಬಲಪಂಥೀಯ ರಂಗದ ವಿರುದ್ಧ ಹೋರಾಡುತ್ತಿರುವ ಎಡ ಪ್ರಜಾಪ್ರಭುತ್ವವಾದೀ ರಂಗವನ್ನು ಜಯಶಾಲಿ ಗೊಳಿಸಬೇಕೆಂದು ಕೇರಳದ ಮತದಾರರಿಗೆ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಪಾಲಿಟ್ ಬ್ಯೂರೋ ಮನವಿ ಮಾಡಿಕೊಳ್ಳುತ್ತದೆ.

1981–82 ರಲ್ಲಿ 21 ತಿಂಗಳು ಎಡ ಪ್ರಜಾಪ್ರಭುತ್ವವಾದೀ ರಂಗ ಅಧಿಕಾರದಲ್ಲಿತ್ತು. ಭಾರೀ ಬಹುಮತದಿಂದಆರಿಸಿ ಬಂದ ತಕ್ಷಣ ಮತದಾರರ ಸಮ್ಮುಖವಿಟ್ಟ ತನ್ನ ಕಾರ್ಯಕ್ರಮವನ್ನು ಜ್ಯಾರಿಗೊಳಿಸಲಾರಂಭಿಸಿತು. ಈ ಹಿಂದಿನ ಸರಕಾರಗಳ ದಮನಕಾರೀ ಧೋರಣೆ ಅನುಸರಿಸಲು ನಿರಾಕರಿಸಿ, NSA, ESMA ಇತ್ಯಾದಿಯನ್ನು ಪ್ರಯೋಗಿಸುವಲ್ಲಿ ಕಾಂಗ್ರೆಸ್ (ಐ) ಸರ್ಕಾರಗಳ ದಾರಿ ಹಿಡಿಯದೆ ರಂಗ ಕಾರ್ಮಿಕರು, ರೈತರು ಹಾಗೂ ಇತರ ದುಡಿಯುವ ಜನತೆಗೆ ರಕ್ಷಣೆ ಕೊಟ್ಟಿತು. ದೇಶಾದ್ಯಂತ ಮೆಚ್ಚುಗೆ ಗಳಿಸಿದ ಸಾರ್ವಜನಿಕ ವಿತರಣಾ ಪದ್ಧತಿಯನ್ನು ಆರಂಭಿಸಿ ಜನಸಾಮಾನ್ಯರಿಗೆ ಅನುಕೂಲ ಮಾಡಿಕೊಟ್ಟಿತು.

ಈ ಎಲ್ಲಾ ಕ್ರಮಗಳಿಂದ ರಂಗದ ಸರ್ಕಾರ ಜನಪ್ರಿಯಗೊಳ್ಳುತ್ತಿರುವುದರಿಂದ ತಲ್ಲಣಗೊಂಡ ಕಾಂಗ್ರೆಸ್ (ಐ), ಆರ್. ಎಸ್. ಎಸ್., ನಕ್ಸಲೀಯರು ಹಾಗೂ ಇತರ ಸಮಾಜ ವಿರೋಧೀ ಶಕ್ತಿಗಳೊಂದಿಗೆ ಸೇರಿ ಹಿಂಸಾತ್ಮಕ ಚಳವಳಿ ಆರಂಭಿಸಿತು. ರಂಗದ ಒಳಗಡೆ ಎ. ಕೆ. ಅಂತೋಣಿ ನೇತೃತ್ವದ ಕಾಂಗ್ರೆಸ್ ಹಾಗೂ ಕೇರಳ ಕಾಂಗ್ರೆಸ್ (ಮಣಿ ಗುಂಪು) ಸರ್ಕಾರ ಉರುಳಿಸುವ ವಿರೋಧಿಗಳ ಪ್ರಯತ್ನದಲ್ಲಿ ಶಾಮೀಲಾಗಿ ತಾವು ಜನತೆಗೆ ಕೊಟ್ಟ ಮಾತನ್ನು ಮುರಿದು ದ್ರೋಹ ಮಾಡಿದರು. ಹಲವಾರು ವರ್ಷಗಳ ಕಾಲ ತನ್ನ ಬೆಂಬಲಿಗರನ್ನು ಯಾರ ವಿರುದ್ಧ ಸತತವಾಗಿ ಸಂಘಟಿಸಿದ್ದರೋ ಅದೇ ಕರುಣಾಕರನ್ ನೇತೃತ್ವದ ಕಾಂಗ್ರೆಸ್ (ಐ) ಪಕ್ಷದೊಂದಿಗೆ ಸೇರುವ ಹಾದಿಯಲ್ಲಿದೆ ಎ.ಕೆ. ಅಂತೋಣಿ ನೇತೃತ್ವದ ಗುಂಪು. ಕೇರಳ ಕಾಂಗ್ರೆಸ್, 1964 ರಲ್ಲಿ ಆಳುವ ಕಾಂಗ್ರೆಸ್‌ನಿಂದ ಬೇರೆಯಾಗಲು ಕಾರಣವಾದ ಮುಖ್ಯ ವಿಷಯ : ರಾಜ್ಯಗಳಿಗೆ ಸ್ವಾಯತ್ತತೆ ಹಾಗೂ ಕೃಷಿಗಾರರ ಹಿತಾಸಕ್ತಿಯ ರಕ್ಷಣೆ. ಅವರೀಗ ಸೇರಿರುವ ಹೊಸ ಗುಂಪು ಅವರು ತಮ್ಮ ಈ ಎರಡೂ ಉದ್ದೇಶಗಳಿಗೆ ವಿಶ್ವಾಸಘಾತ ಮಾಡುವಂತೆ ಬಲವಂತ ಮಾಡುತ್ತದೆ.

ಈ ಎರಡು ಪಕ್ಷಗಳು ಹಾಗೂ ಕಾಂಗ್ರೆಸ್]ಐ] ನ ಅಲ್ಪಮತ ಸರ್ಕಾರ ಮುಂದುವರಿಸುವ ಲೆಕ್ಕಾಚಾರ ಸಂಪೂರ್ಣವಾಗಿ ತಲೆಕೆಳಗಾದುದರ ಬಗ್ಗೆ ಪಾಲಿಟ್ ಬ್ಯೂರೋ ತೃಪ್ತಿ ವ್ಯಕ್ತಪಡಿಸುವುದಾದರೂ ಎಡ-ಪ್ರಜಾಪ್ರಭುತ್ವ ರಂಗ ಎಲ್ಲಾ ಪಟ್ಟಭದ್ರ ಹಿತಾಸಕ್ತಿಗಳು, ಅವರ ಬೆಂಬಲಿಗನಾದ ಕೇಂದ್ರ ಸರ್ಕಾರ ಹಾಗೂ ಕೇಂದ್ರ ಸರ್ಕಾರದ ಕೈಗೊಂಬೆಯಾಗಿ ವರ್ತಿಸುವ ರಾಜ್ಯಪಾಲರ ಆಡಳಿತ ಇವುಗಳ ಸಂಯುಕ್ತ ವಿರೋಧವನ್ನು ಎದುರಿಸಬೇಕಾಗಿದೆ ಎಂಬುದರ ಕಡೆಗೆ ಗಮನ ಸೆಳೆಯ ಬಯಸುತ್ತದೆ.

ಕಾಂಗ್ರೆಸ್ [ಐ] ನೇತೃತ್ವದಲ್ಲಿರುವ ಹಲವು ಪಕ್ಷಗಳ ಹಾಗೂ ಗುಂಪುಗಳ ಸಮಯ ಸಾಧಕ ಗುಂಪು, ಪ್ರಜಾಪ್ರಭುತ್ವ, ರಾಷ್ಟ್ರೀಯ ಐಕ್ಯತೆ ಹಾಗೂ ದುಡಿಯುವ ಜನತೆಯ ಜೀವನ ಸ್ಥಿತಿಗೆ ಅಪಾಯ ಉಂಟುಮಾಡಲಿದೆಯೆಂಬುದನ್ನು ಕೇರಳದ ಜನತೆ ಮನಗಾಣಬೇಕು. ಮೀಸಲಾತಿ ಬಗ್ಗೆ ತೀವ್ರ ಭಿನ್ನಾಭಿಪ್ರಾಯ ಹೊಂದಿರುವ NOP, SRP ಮೊದಲಾದ ಸಂಘಟನೆಗಳ ನಾಯಕರೂ ಈ ಗುಂಪಿನಲ್ಲಿ ಸೇರಿದ್ದಾರೆ. ಆರ್. ಎಸ್. ಎಸ್. ನೊಂದಿಗೆ ಕೈ ಮಿಲಾಯಿಸಿ ಜಾತ್ಯತೀತ ಶಕ್ತಿಗಳ ಮೇಲೆ ಹಲ್ಲೆ ನಡೆಸಲೂ ಹಿಂಜರಿಯದ ಕೆಲವು ಮುಸ್ಲಿಂ, ಕ್ರಿಶ್ಚಿಯನ್, ಅಲ್ಪಸಂಖ್ಯಾತರ ನಾಯಕರೂ ಈ ಗುಂಪಿನಲ್ಲಿದ್ದಾರೆ. ಆ ರೀತಿ ಸಮಯ ಸಾಧಿತ ಗುಂಪು ಹಿಂದೂ ಪುನರುತ್ಥಾನ ವಾದಕ್ಕೆ ಅವಕಾಶ ಕೊಟ್ಟು ಅಲ್ಪಸಂಖ್ಯಾತ ಕೋಮುಗಳಿಗೆ ಮಾತ್ರವಲ್ಲ, ಹಿಂದೂ ಸಮಾಜದ ಪರಿಶಿಷ್ಟ ಹಾಗೂ ಹಿಂದುಳಿದ ಜಾತಿಗಳಿಗೂ ಅಪಾಯ ತಂದೊಡ್ಡುತ್ತಿದೆ.

ಚಂದಾದಾರರು - ಏಜೆನ್ಸಿದಾರರ ಗಮನಕ್ಕೆ

ಪತ್ರಿಕೆಯ ಬಾಕಿ ಹಣವನ್ನು ಕಳುಹಿಸಿ ಕೊಡುವಂತೆ ಚಂದಾದಾರರನ್ನು, ಏಜನ್ಸಿದಾರರನ್ನು ಈಗಾಗಲೇ ಅಂಚೆ ಮೂಲಕ ಅನೇಕ ಸಲ ವಿನಂತಿಸಿಕೊಂಡಿದ್ದೇವೆ. ಹಣ ಕಳಿಸಿ ಸಹಕರಿಸದೇ ಇದ್ದಲ್ಲಿ ಐಕ್ಯರಂಗವನ್ನು ಉಳಿಸಿ ಬೆಳೆಸಲು ಅಶಕ್ಯ.

ಚಂದಾದಾರರ ಅವಧಿ ಮುಗಿಯುವ ಮುನ್ನವೇ ಅವರುಗಳಿಗೆ ಪತ್ರ ಮೂಲಕ ಜ್ಞಾಪಿಸುತ್ತಿದ್ದೇವೆ. ಅನೇಕ ಏಜೆನ್ಸಿದಾರರು, ಬಿಲ್ ಕಳಿಸಿದ್ದರೂ ಹಣ ಕಳಿಸಿಕೊಡುತ್ತಿಲ್ಲ.

ಇನ್ನು ಮುಂದೆ ನಿಯಮಿತ ಅವಧಿಯೊಳಗೆ ಹಣ ಬಾರದಿದ್ದಲ್ಲಿ ಏಜೆನ್ಸಿದಾರರಿಗೆ ಪತ್ರಿಕೆಗಳನ್ನು ಕಳಿಸಿಕೊಡುವುದನ್ನು ಯಾವುದೇ ಮುನ್ಸೂಚನೆ ಇಲ್ಲದೇ ನಿಲ್ಲಿಸಲಾಗುವದು.

ಜ್ಞಾಪಕ ಪತ್ರ ಬಂದೊಡನೆ ಚಂದಾ ಹಣ ಕೂಡಲೇ ಕಳಿಸುವಂತೆ ಚಂದಾದಾರರನ್ನು ಈ ಮೂಲಕ ವಿನಂತಿಸುತ್ತಿದ್ದೇವೆ. ಇನ್ನು ಮುಂದೆ ರಿಯಾಯತಿ ನೀಡಲು ಸಾಧ್ಯವೇ ಇಲ್ಲ.

ಹೊಸದಾಗಿ ಏಜೆನ್ಸಿದಾರರಾಗ ಬಯಸುವವರು ತಲಾ ಪ್ರತಿಗೆ 3 ರೂ. ಯಂತೆ ಠೇವಣಿ ಕಳಿಸಿ ಬರೆಯಬೇಕು.. ಈಗ ಏಜೆನ್ಸಿದಾರರಾಗಿರುವವರು ಪತ್ರಿಕೆಗಳ ಸಂಖ್ಯೆ ಹೆಚ್ಚಿಸಬೇಕೆಂದಿದ್ದಲ್ಲಿ ಹೆಚ್ಚಿನ ಠೇವಣಿ ಕಳಿಸದಿದ್ದಲ್ಲಿ ಅವರ ಕೋರಿಕೆಯನ್ನು ಮನ್ನಿಸಲಾಗುವುದಿಲ್ಲ.

ಐಕ್ಯರಂಗದ ಬ್ಯಾಂಕ್ ಖಾತೆಯು ಬೆಂಗಳೂರಿನ ಬಳೇಪೇಟೆಯ ಸಿಂಡಿಕೇಟ್ ಬ್ಯಾಂಕಿನಲ್ಲಿದೆ. ಖಾತೆ ನಂ. 6944 (SB). ಈ ಖಾತೆಗೆ ನೇರವಾಗಿ ಎಂ. ಟಿ. (Mail Transfer) ಕಳಿಸಬಹುದು. ಇಲ್ಲವೇ ನಮಗೇ ಡಿ.ಡಿ (Demand Draft) ಯನ್ನಾದರೂ ಕಳುಹಿಸಬಹುದು. ಕಳಿಸುವಾಗ 'ಸಂಪಾದಕ, ಐಕ್ಯರಂಗ' ಇಲ್ಲವೇ 'ವ್ಯವಸ್ಥಾಪಕ ಐಕ್ಯರಂಗ' ಎಂಬ ಹೆಸರಿನಿಂದ ಮಾತ್ರ ಕಳಿಸಬೇಕು.

ವ್ಯವಸ್ಥಾಪಕ
ಐಕ್ಯರಂಗ

ಕೋಟೇಕಾರ್-ಸರ್ಕಲ್

ರೈತ ಸಂಘದ ಆಶ್ರಯದಲ್ಲಿ ಪ್ರಚಾರ ಸಭೆಗಳು.

ರೈತರ ಕೃಷಿ ಉತ್ಪನ್ನಗಳಿಗೆ ಯೋಗ್ಯ ಬೆಲೆ ಸಿಗಬೇಕು, ಹಳೇ ಸಾಲಗಳನ್ನು ರದ್ದು ಮಾಡಬೇಕು, ಟ್ರಿಬ್ಯುನಲ್‌ನಲ್ಲಿ ಆದ ರೈತ ವಿರೋಧಿ ತೀರ್ಪುಗಳನ್ನು ಪುನರ್ ಪರಿಶೀಲಿಸಬೇಕು, ಬಂಜರು ಭೂಮಿಯನ್ನು, ಮಿಗತ ಭೂಮಿಯನ್ನು ಭೂಹೀನರಿಗೆ ವಿತರಣೆ ಮಾಡಬೇಕು, ನೆರೆ ಪರಿಹಾರ ಸಾಲವನ್ನು ಮಾಫೀ ಮಾಡಬೇಕು, ಹಳೇ ಗೇಣಿಯನ್ನು ರದ್ದುಗೊಳಿಸಬೇಕು ಎಂಬಿತ್ಯಾದಿ ಬೇಡಿಕೆಗಳನ್ನಿಟ್ಟು ಕೋಟೆಕಾರ್ ಸರ್ಕಲ್ ರೈತ ಸಂಘದ ಆಶ್ರಯದಲ್ಲಿ ಪ್ರಚಾರ ಸಭೆಗಳು ನಡೆದಿವೆ

21-3-82 ರಂದು ಮುನ್ನೂರಿನಲ್ಲಿ, 30-3-82 ರಂದು ಕೈಕಂಭದಲ್ಲಿ, 31-3-82 ರಂದು ಪಕ್ಕಲಡ್ಕದಲ್ಲೂ, 3-4-82 ರಂದು ತಲಪಾಡಿಯಲ್ಲೂ, 4-4-82 ರಂದು ಕೋಣಾಜೆಯಲ್ಲೂ ಈ ಪ್ರಚಾರ ಸಭೆಗಳು ನಡೆದಿವೆ.

ಈ ಮೇಲ್ಕಂಡ ಸ್ಥಳಗಳಲ್ಲಿ ನಡೆದ ಸಭೆಗಳನ್ನುದ್ದೇಶಿಸಿ ಕಾಂ॥ಬಿ. ಮಾಧವ, ಯು. ಜನಾರ್ಧನ್ ನಾಯಕ್, ಬಿ. ಎಂ. ಶಾಮಶೆಟ್ಟಿ, ಜೆ. ಕೃಷ್ಣಪ್ಪ, ಯು. ಪಿ. ಡಿಸೋಜ ಮೊದಲಾದವರು ಮಾತನಾಡಿದರು.

ಮಂಗಳೂರು

ಕನಿಷ್ಠ ಕೂಲಿ ಜಾರಿಗೆ ಒತ್ತಾಯಿಸಿ

ಪ್ರೆಸ್ ಕಾರ್ಮಿಕರ ಮೆರವಣಿಗೆ

20-4-82 ರಂದು ಕನಿಷ್ಠ ಕೂಲಿ ಜಾರಿಗೆ ಒತ್ತಾಯಿಸಿ ಪ್ರೆಸ್ ಕಾರ್ಮಿಕರು ಎಸ್. ಕೆ. ಪ್ರೆಸ್ ವರ್ಕರ್ಸ್ ಯೂನಿಯನ್ನಿನ ನೇತೃತ್ವದಲ್ಲಿ ನಗರದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಹೊರಡಿಸಿದ್ದರು.

ತಕ್ಷಣ ಕನಿಷ್ಠ ಕೂಲಿ ಜಾರಿಗೊಳಿಸಬೇಕೆಂದೂ, ಇಲ್ಲವಾದಲ್ಲಿ ತೀವ್ರ ಹೋರಾಟಕ್ಕಿಳಿಯಬೇಕಾದೀತೆಂದು ಎಚ್ಚರಿಸಿ ಎಸ್. ಕೆ. ಮಾಸ್ಟರ್ಸ್ ಪ್ರಿಂಟರ್ಸ್ ಅಸೋಸಿಯೇಷನ್ ಕಾರ್ಯದರ್ಶಿಯವರಿಗೆ ಮನವಿ ಪತ್ರವನ್ನು ಸಲ್ಲಿಸಲಾಗಿದೆ.

ಸತ್ಯಾಗ್ರಹಿಗಳ ಮೇಲೆ

ದೌರ್ಜನ್ಯ – ಖಂಡನೆ

ಏ. 19 ರಂದು, ಗೋಕಾಕ್ ವರದಿಯನ್ನು ಜಾರಿಗೊಳಿಸುವಂತೆ ಒತ್ತಾಯಿಸಿ ವಿಧಾನಸೌಧದ ಎದುರು ಸತ್ಯಾಗ್ರಹ ನಡೆಸುತ್ತಿದ್ದ ಸತ್ಯಾಗ್ರಹಿಗಳ ಮೇಲೆ ಏ. ಸಿ. ಪಿ. (ಅಸಿಸ್ಟೆಂಟ್ ಕಮೀಷನರ್ ಆಫ್ ಪೋಲೀಸ್) ಅಯ್ಯಪ್ಪ ಎಂಬುವವರ ನೇತೃತ್ವದಲ್ಲಿ ದೌರ್ಜನ್ಯವೆಸಗಿದ್ದಾರೆ. ಸತ್ಯಾಗ್ರಹ ಶಿಭಿರಗಳನ್ನು ಕಿತ್ತೆಸೆದಿದ್ದಾರೆ. ಸತ್ಯಾಗ್ರಹಿಗಳನ್ನು ಬಂಧಿಸಿದ್ದಾರೆ.

ಅರ್ಧರಾತ್ರಿಯಲ್ಲಿ ನಡೆದ ಪೋಲೀಸರ ಈ ಕಾರ್ಯಾಚರಣೆಯಲ್ಲಿ ಅನೇಕರು ಲಾಠಿ ಏಟು ಪಡೆದಿದ್ದಾರೆ. ರಾಜಶೇಖರ ಎಂಬ ಫೋಟೋಗ್ರಾಫರರನ್ನು ಎಳೆದೊಯ್ದು ಥಳಿಸಿದ್ದಲ್ಲದೇ ಅವರ ಕ್ಯಾಮಾರಾವನ್ನು ಕಿತ್ತೆಸೆದಿದ್ದಾರೆ. ಇದನ್ನು ಪ್ರತಿಭಟಿಸಿದ ಸುಧಾ ವಾರಪತ್ರಿಕೆಯ ಸಂಪಾದಕರನ್ನು ಅಯ್ಯಪ್ಪ ಬೆದರಿಸಿದ್ದಾರೆ.

ಪೋಲೀಸರ ಈ ಕ್ರಮವನ್ನು ಸಿ.ಪಿ. ಐ.(ಎಂ.) ಬೆಂಗಳೂರು ಜಿಲ್ಲಾ ಸಮಿತಿ ತೀವ್ರವಾಗಿ ಖಂಡಿಸಿರುವುದಲ್ಲದೇ, ಪೋಲೀಸರು ಸರ್ವಾಧಿಕಾರಿಗಳಂತೆ ವರ್ತಿಸುತ್ತಿರುವುದನ್ನು ನಾಗರೀಕರು ಪ್ರತಿಭಟಿಸಬೇಕೆಂದು ಕರೆ ನೀಡಿದೆ.

——ಹಸಿದ ಕಣ್ಣುಗಳಿಂದ——

ಮತೀಯ ಕುನ್ನಿಗಳು

ಆರ್.ಎಸ್.ಎಸ್. ನ ಚಡ್ಡಿಗಳು, ಬಾಜಪದ ದೇಶಭಕ್ತರು ಮತ್ತೆ ಈಗ ಬೆಂಗಳೂರಿನ ಗಲ್ಲಿಗಳಲ್ಲಿ, ಸ್ಲಮ್‌ಗಳಲ್ಲಿ ತಮ್ಮ ಉದ್ಬುದ್ಧ ಭಾಷಣ ಬಿಗಿಯುತ್ತಿದ್ದಾರೆ. 'ಹಿಂದೂ'ಗಳಲ್ಲಿ ಅಭಿಮಾನ ಮೂಡಿಸಲು, ಮುಂಬರುವ ಚುನಾವಣೆಗಳಲ್ಲಿ ಬಾಜಪವನ್ನು ಅಧಿಕಾರಕ್ಕೆ ತರಲು ಈ ಚಡ್ಡಿಗಳು ಎಲ್ಲೆಂದರಲ್ಲಿ ಲಾಠೀ ತಿರುವುತ್ತಿದ್ದಾರೆ.

ಕಳೆದವಾರ ಕರ್ನಾಟಕದಲ್ಲಿ ನಡೆದ ಗೋಕಾಕ್ ವರದಿಯ ಜ್ಯಾರಿಗೆ ಒತ್ತಾಯಿಸಿ ನಡೆದ ಚಳುವಳಿಯಲ್ಲಿ ಮತೀಯ ಭಾವನೆ ಮೂಡಿಸಲು ಆರ್. ಎಸ್.ಎಸ್. ಪ್ರೇಮಿಗಳು ಹೆಣಗಾಡಿದರು. ಮುಸ್ಲಿಮರನ್ನು ಕನ್ನಡಿಗರಿಂದ ದೂರಮಾಡಿ ಅವರು ಕನ್ನಡಿಗರಲ್ಲ ಎಂಬ ಲೇಬಲ್ ಹಚ್ಚಿಸಲು ಪ್ರಯತ್ನವೂ ನಡೆಯಿತು.

ಆರ್. ಎಸ್. ಎಸ್. ನವರ ಈ ಕುತಂತ್ರದಿಂದ ಹೊರನಾಡಿನಲ್ಲಿರುವ ಕನ್ನಡಿಗರಿಗೆ ಮತ್ತೆ ಕಿರುಕುಳ ಪ್ರಾರಂಭವಾಗುವ ಲಕ್ಷಣ ಕಂಡು ಬರುತ್ತಿದೆ. ಮಹಾರಾಷ್ಟ್ರದ ಶಿವಸೇನೆ ಈಗಾಗಲೇ ಅಪಸ್ವರ ಹೊರಡಿಸಿದೆ.

ಭಾಷಾ ಹೋರಾಟಗಾರರು, ಮತೀಯ ದ್ವೇಷ ಬಿತ್ತುವ ಮತೀಯ ಕುನ್ನಿಗಳ ಬಗ್ಗೆ ಎಚ್ಚರ ವಹಿಸುವುದು ಅನಿವಾರ್ಯವಾಗಿದೆ.

ರಾಜಕೀಯ ತೆರೆಗೆ ತಾರೆಯರು

ಗಾಂಧೀಟೋಪಿ ರಾಜಕಾರಣಿಗಳೆಲ್ಲ ಸಿನೇಮಾ ತಾರೆಯರ ಬೆನ್ನು ಹತ್ತಿದಾಗ, ತೆರೆಯ ಮೇಲೆ ಮಿಂಚಿದ ತಾರೆಯರು ಈಗ ರಾಜಕೀಯ ತೆರೆಯ ಮೇಲೆ ಮಿಂಚಲು ಹಾತೊರೆಯುತ್ತಿದ್ದಾರೆ. ಕತ್ತಿ. ಚಾಕು ಹಿಡಿದ ಈ ಹಿರೋಗಳು ಗಾಂಧೀಟೋಪಿ ಹಾಕಿಕೊಳ್ಳಲು ಸಜ್ಜಾಗುತ್ತಿದ್ದಾರೆ. ಆದರೆ ಈ ಟೋಪಿ ಕಳಚಿಟ್ಟ ಓರಿಜನಲ್ ದೇಶಭಕ್ತ ರಾಜಕಾರಣಿಗಳು ಸಿನಿಮಾ ನಟಿಯರ ಟೊಂಕದ ಅಳತೆ ಅಳೆಯುವಾಗ, ಆ ಸಿನೇಮಾ ತಾರೆಯರೇಕೆ ಈ ಭ್ರಷ್ಟ ರಾಜಕಾರಣಿಗಳ ಬುದ್ಧಿ ಅಳೆಯಬಾರದು. ?

ಹೌದು, ಹಾಗೆಂದು ತೆಲುಗಿನ ನಟಸಾಮ್ರಾಟ್ NTR ಈಗ ಭಾರತದ ಭ್ರಷ್ಟ ರಾಜಕೀಯಕ್ಕೆ ಧುಮುಕಿದ್ದಾರೆ. ಮಲಯಾಳಂನ ಯುವ್ವರ್ ಗ್ರಿನ್ ಹೀರೋ ಪ್ರೇಮ್‌ನಜೀರ್ ತಮ್ಮ ಸಿನೇಮ ನಾಯಕಿಯರೊಂದಿಗೆ ಕಾಂಗ್ರೆ ಸೇರುತ್ತಲಿದ್ದಾರೆ. ತಮಿಳಿನ ನಟ-ರಾಜಕಾರಣಿ MGR ಮುಖ್ಯ ಮಂತ್ರಿಯಾಗಿ ತಮಿಳುನಾಡಿನ ಸೇವೆ ಸಲ್ಲಿಸುತ್ತಿದ್ದಾರೆ. ಹಿಂದೀ ಚಿತ್ರರಂಗದ ಹೀರೋ ಅಮಿತಾಬ್ ಬಚ್ಚನ್ ರಾಜೀವ ಗಾಂಧಿಯವರೊಡನೆ ಮಸಲತ್ತು ನಡೆಸಿದ್ದಾರೆ.

ಈಗ ಕನ್ನಡ ಚಿತ್ರರಂಗದ ನಾಯಕ ನಟ ರಾಜ್‌ಕುಮಾರ್ ಅವರನ್ನೂ ರಾಜಕೀಯಕ್ಕೆ ಬರಲು ಕೈಹಿಡಿದೆಳೆಯುವ ಪ್ರಯತ್ನವೂ ನಡೆದಿದೆ.

ಇಂಡಿಯಾದ ರಾಜಕೀಯದ ರಜತ ಪರದೆ ಮೇಲೆ ಒಂಟಿ ನಾಯಕಿಯನ್ನು ನೋಡಿ-ನೋಡಿ ಬೇಸತ್ತ ಜನ ಈ ಹೊಸ ಮುಖಗಳಿಗೆ ಕಾಯುತ್ತಿದ್ದಾರೇನೋ ಎನ್ನುವಂತೆ ಸಿನೇಮಾದ ಮಂದಿ ಭ್ರಮಿಸಿ ಧಡಾರನೆ ರಾಜಕೀಯಕ್ಕೆ ನುಗ್ಗಲು ಕ್ಯೂ ಹಚ್ಚ ತೊಡಗಿದ್ದಾರೆ. ಸಿನೇಮಾ ಪ್ರೇಕ್ಷಕರಿಗೆ ಗಾಬರಿಯಾಗತೊಡಗಿದೆ.. ಕೋತಿ ಚೇಷ್ಟೆ ಮಾಡುವ ಈ ಸಿನೇಮಾದವರು ರಾಜಕೀಯಕ್ಕೆ ಬಂದರೆ ಇನ್ನ್ಯಾವ ಚೇಷ್ಟೆ ಮಾಡುವರೆಂಬ ಹೆದರಿಕೆ ಕಾಡತೊಡಗಿದೆ.

ಹೊಸ ಮುಖ ಹೊತ್ತುಕೊಂಡು ರಾಜಕೀಯಕ್ಕೆ ಬರಲಿರುವ ಹಿರೋಗಳಿಂದ ಜನ ನಿರೀಕ್ಷಿಸುವುದೇನು ? ಒಳ್ಳೆಯ ಸರಕಾರವೋ ಅಥವಾ ಒಳ್ಳೆಯ ಸಿನಿಮಾವೋ? ಈಗ ನಾವು ಆಲೋಚಿಸಬೇಕಾಗಿದೆ. ಬಣ್ಣದ ಮನುಷ್ಯರ ಓರಿಜನಲ್ ಬಣ್ಣ ಏನು ? ಅಂತ.

ಕಾಂಗ್ರೆಸ್‌ನ ಖದೀಮ ಕತ್ತೆಗಳ ಮುಖವಾಡ ಹೊತ್ತುಕೊಂಡು ಸಿನೇಮಾದವರೇನಾದರೂ ಬಂದರೆ, ಮತ್ತೆ ನಾವು ಬರೀ ಹೊಟ್ಟೆಯಿಂದ ಈ ಖದೀಮರ ಹನ್ನೆರಡನೇ ಅವತಾರ ನೋಡಬೇಕಾಗಿ ಬಂದೀತು.. !

— ಎಸ್ .ಎನ್. ಕೆ.

ಸಮ್ಮೇಳನ ಮುಂದಕ್ಕೆ

ಏಪ್ರಿಲ್ 25 ಮತ್ತು 26 ರಂದು ಬಿಜಾಪುರದಲ್ಲಿ ನಡೆಯಲಿದ್ದ ಎರಡನೇ ಜಿಲ್ಲಾ ರೈತ ಸಮ್ಮೇಳನವನ್ನು ಮುಂದೂಡಲಾಗಿದೆ. ಜಿಲ್ಲೆಯಾದ್ಯಂತ ನಿಷೇದಾಜ್ಞೆ ಜಾರಿಯಿರುವುದರಿಂದ ಈ ಕ್ರಮ ಕೈಗೊಳ್ಳಬೇಕಾಗಿದೆ. ಎಂದು ಜಿಲ್ಲಾ ರೈತ ಸಂಘದ ಅಧ್ಯಕ್ಷ ಕಾಂ| ಭೀಮಸಿ ಕಲಾದಗಿ ತಿಳಿಸಿದ್ದಾರೆ.

ಚುನಾವಣಾ ಹೋರಾಟ

(1ನೇ ಪುಟದಿಂದ)

ಈಗ ಯಾವದೇ ಲಜ್ಜೆ ಇಲ್ಲದೇ ಕಾಂಗ್ರೆ ಜೊತೆಗೆ ಸೇರಿರುವುದು ನಾಚಿಗ್ಗೇಡಿನ ಸಂಗತಿಯಾಗಿದೆ. ಕೇರಳದಲ್ಲಿ ಕೆಲವು ರಾಜಕೀಯ ಪಕ್ಷಗಳು ತಮ್ಮ ಪಕ್ಷದ ರಾಷ್ಟ್ರೀಯ ಸಮಿತಿಗಳ ನಿಲುವೆಯನ್ನು ಧಿಕ್ಕರಿಸಿ ಕಾಂಗ್ರೆಯೊಂದಿಗೆ ಸೀಟು ಹಂಚಿಕೆಯ ವ್ಯವಸ್ಥೆಯಲ್ಲಿ ತೊಡಗಿವೆ. ಜನತಾ ಪಕ್ಷದ ರಾಷ್ಟ್ರೀಯ ನಾಯಕತ್ವವು ಎಲ್ಲಾ ನೀತಿ ನಿಯಮಗಳನ್ನು ಬಿಟ್ಟು ತನ್ನ ಪ. ಬಂಗಾಳ ಘಟಕವು ಕಾಂಗ್ರೆಯೊಂದಿಗೆ ಮಾಡಿಕೊಂಡಿರುವ ಒಪ್ಪಂದವನ್ನು ಸಮರ್ಥಿಸಿದೆ. ಈ ಎರಡೂ ರಾಜ್ಯಗಳ ಜನತೆ ಕಾಂಗ್ರೆಯನ್ನು ಸೋಲಿಸುವದರ ಜೊತೆಗೆ ಪ್ರಜಾಪ್ರಭುತ್ವಕ್ಕೆ ದ್ರೋಹ ಮಾಡಿರುವವರನ್ನೂ ತಿರಸ್ಕರಿಸುತ್ತದೆಂದು ನಾವು ಭಾವಿಸುತ್ತೇವೆ.

ಮೇ ನಲ್ಲಿ ಬರಲಿರುವ ಈ ಚುನಾವಣೆಗಳು, ದೇಶದ ರಕ್ಷಣೆಗೆ ಮತ್ತು ಐಕ್ಯತೆಯನ್ನು ರಕ್ಷಿಸುವುದಕ್ಕೂ, ಸರ್ವಾಧಿಕಾರಿ ಶಕ್ತಿಗಳನ್ನು ಸೋಲಿಸುವುದಕ್ಕೂ ಒಂದು ಅವಕಾಶವಾಗಿರುವುದರಿಂದ ಎಡ ಮತ್ತು ಪ್ರಜಾಪ್ರಭುತ್ವ ಶಕ್ತಿಗಳು ಜೊತೆಗೂಡಿ ಐಕ್ಯತೆಯಿಂದ ಹೋರಾಡಬೇಕೆಂದು ತೀರ್ಮಾನಿಸಬೇಕಾಗಿರುವುದು ಅತ್ಯಗತ್ಯ.

—

ಬೆಂಗಳೂರು :

ಅಕ್ರಮ ಬಂಧನ

ಸುಮಾರು ಒಂದು ತಿಂಗಳಿನಿಂದಲೂ ಹೋರಾಟದಲ್ಲಿರುವ ಕ್ರಿಸ್ಪ್ ಬಿಸ್ಕಿಟ್ ಕಾರ್ಮಿಕರ ಹೋರಾಟ ಸದೆಬಡೆಯಬೇಕೆಂದು ತೀರ್ಮಾನಿಸಿ, ಗಲಭೆಯೊಂದರ ನೆಪವೊಡ್ಡಿ ಕ್ರಿಸ್ಪ್ ಬಿಸ್ಕಿಟ್ ಸಂಘದ ಸಕ್ರೀಯ ಕಾರ್ಯಕರ್ತರನ್ನು ಪೋಲಿಸರು ಬಂಧಿಸಿದ್ದಾರೆ. ಬಂಧಿತರಲ್ಲಿ ಕ್ರಿಸ್ಪ್ ಬಿಸ್ಕಿಟ್ ಯೂನಿಯನ್ನಿನ ಪ್ರಧಾನ ಕಾರ್ಯದರ್ಶಿಯೂ, ಸಿ ಐ ಟಿ ಯು ಜಿಲ್ಲಾ ಸಹಕಾರ್ಯದರ್ಶಿಯೂ ಆಗಿರುವ ಕಾಂ| ಆರ್. ಶ್ರೀನಿವಾಸ್ ಅವರೂ ಸೇರಿದ್ದರು.

ಬಂಧಿತರ ಮೇಲೆ ಐ.ಪಿ.ಸಿ. 307 (ಕೊಲೆಗೆ ಯತ್ನ) ಕೇಸ್ ದಾಖಲು ಮಾಡಿಕೊಂಡಿದ್ದರಿಂದ, ನ್ಯಾಯಾಧೀಶರು ಜಾಮೀನಿನ ಮೇಲೆ ಬಿಡುಗಡೆ ಮಾಡಲು ನಿರಾಕರಿಸಿದ್ದರಿಂದಾಗಿ ಕಾಂ| ಶ್ರೀನಿವಾಸ್ ಮತ್ತಿತರರನ್ನು ದಿನಾಂಕ 16 ರಂದು ಜೈಲಿಗೆ ಕಳಿಸಲಾಗಿತ್ತು. ದಿನಾಂಕ 22 ರಂದು ಮತ್ತೊಮ್ಮೆ ಪ್ರಯತ್ನಿಸಿ ಬಂಧಿತರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಿಸಲಾಗಿದೆ.

ಹೋರಾಟವನ್ನು ಬಗ್ಗು ಬಡಿಯುವ ಪೋಲಿಸರ ಕುತಂತ್ರವನ್ನು ಸಿ.ಐ.ಟಿ.ಯು. ಖಂಡಿಸುತ್ತದೆ.

ಕನ್ನಡ ಆಡಳಿತ ಭಾಷೆಗೆ ಒತ್ತಾಯಿಸಿ ಧರಣಾ-ಮತಪ್ರದರ್ಶನ, ೪೩ ಜನರ ಬಂಧನ.

ಕನ್ನಡ ಭಾಷೆ ಆಡಳಿತ ಭಾಷೆಯಾಗಿ ಕೂಡಲೇ ಎಲ್ಲಾ ಹಂತದಲ್ಲೂ ಜಾರಿಗೆ ಬರಲಿ; ಇಂಗ್ಲೀಷ್ ಪ್ರಾಧಾನ್ಯತೆ ತೊಲಗಲಿ ; ಕನ್ನಡೇತರರ ಹಿತರಕ್ಷಣೆಗೆ ಧಕ್ಕೆ ಬರದಂತೆ ಸೂಕ್ತ ತಿದ್ದುಪಡಿಯೊಂದಿಗೆ ಗೋಕಾಕ್ ವರದಿ ಜಾರಿಯಾಗಲಿ ಈ ಮುಂತಾದ ಬೇಡಿಕೆಗಳನ್ನು ಒತ್ತಾಯಿಸಿ ಹೈಕೋರ್ಟ್ ಆವರಣದಲ್ಲಿ ಸಿ. ಪಿ. ಐ. (ಎಂ) ಕಾರ್ಯಕರ್ತರು ಮತ ಪ್ರದರ್ಶನ ನಡೆಸಿದರು. ಮತ ಪ್ರದರ್ಶನದಲ್ಲಿ ಪಾಲ್ಗೊಂಡಿದ್ದ 43 ಕಾರ್ಯಕರ್ತರನ್ನು ಪೋಲೀಸರು ಬಂಧಿಸಿದ್ದರು. ಸಿ.ಪಿ.ಐ.(ಎಂ) ಬೆಂಗಳೂರು ಜಿಲ್ಲಾ ಸಮಿತಿಯ ಆಶ್ರಯದಲ್ಲಿ ಈ ಕಾರ್ಯಕ್ರಮ ಏರ್ಪಡಿಸಲಾಗಿತ್ತು.

ಈ ಬಂಧನಕ್ಕೆ ಮುಂಚೆ ಘೋಷಣೆಗಳನ್ನು ಕೂಗುತ್ತ ಕೋರ್ಟ್ ಒಳಗೇ ಧರಣಿ ಕುಳಿತಿದ್ದರಿಂದಾಗಿ ಕೋರ್ಟ್ ಕಲಾಪಗಳು ಕೆಲವು ಹೊತ್ತು ಸ್ಥಗಿತವಾಗಿತ್ತು.

ಬಂಧಿತರಲ್ಲಿ ಜಿಲ್ಲಾ ಸಮಿತಿಯ ಕಾರ್ಯದರ್ಶಿ ಕಾಂ| ಪಿ. ಕೆ. ಸುಬ್ರಮಣಿ, ಪಿ. ಜಗನ್ನಾಥ, ಕೆ. ನಾರಾಯಣ ರಾವ್, ಕೃಷ್ಣಕುಮಾರ್, ಎ ವಿ. ರಮೇಶ್, ಜಿ. ವಿ. ಶ್ರೀರಾಮರೆಡ್ಡಿ ಮತ್ತು ಕಾಂ| ಎಸ್. ಆರ್. ಆರಾಧ್ಯ ಮತ್ತಿತರರು ಸೇರಿದ್ದರು.

ಬಂಧಿತರನ್ನು 22 ರಂದು (ಗುರುವಾರ) ಕೋರ್ಟಿಗೆ ಹಾಜರಾಗಬೇಕೆಂದು ಆದೇಶಿಸಿ ಬಿಡುಗಡೆ ಮಾಡಲಾಗಿತ್ತು. ಆ ಮೇರೆಗೆ 43 ಸಂಗಾತಿಗಳು ಕೋರ್ಟಿಗೆ ಹಾಜರಾಗಿದ್ದರು. ಮೊದಲು ಇವರುಗಳನ್ನು ವಯಕ್ತಿಕ ಜಾಮೀನಿನ ಮೇಲೆ ಬಿಡುಗಡೆ ಮಾಡಲು ಸಿಟಿ ಮ್ಯಾಜಿಸ್ಟ್ರೇಟ್ ಎರಡನೇ ಕೋರ್ಟಿನ ನ್ಯಾಯಾಧೀಶರು ನಿರಾಕರಿಸಿದರು. ಮೊದಲು ಬಂಧಿತರಾಗಿದ್ದ ವಕೀಲ ತಂಡದವರನ್ನು ವಯಕ್ತಿಕ ಜಾಮೀನಿನ ಮೇಲೆ ಬಿಡುಗಡೆ ಮಾಡಿದ್ದನ್ನು ಉದಹರಿಸಿದ ಪಕ್ಷದ ಕಾರ್ಯಕರ್ತರು ನ್ಯಾಯಾಧೀಶರ ಕ್ರಮವನ್ನು ಪ್ರತಿಭಟಿಸಿ ಕೋರ್ಟು ಆವರಣದಲ್ಲೇ ಧರಣಿ ಕುಳಿತಿದ್ದರಿಂದಾಗಿ ಅನಿವಾರ್ಯವಾಗಿ ವಯಕ್ತಿಕ ಜಾಮೀನಿನ ಮೇಲೆ ಬಿಡುಗಡೆ ಮಾಡಿದರು.

ಪರಿಸರ

● ಜ್ಯೋತಿ ಪ್ರಕಾಶ್ ಸುಪ್ರೀಂ ಕೋರ್ಟಿಗೆ ಸಲ್ಲಿಸಿದ ರಿಟ್ ಅರ್ಜಿಯಲ್ಲಿ ವಿಂಧ್ಯ ಪ್ರದೇಶದ ಜೀತದಾಳುಗಳಿಗೆ ಹಾಗೂ ಕೃಷಿ ಕಾರ್ಮಿಕರಿಗೆ ಕೂಲಿಯನ್ನು ಮುಖ್ಯ ಆಹಾರವಾಗಿ ಉಪಯೋಗಿಸಿದರೆ ಕಾಲಿನ ಪಾರ್ಶ್ವವಾಯು ಉಂಟುಮಾಡುವ ವಿಪತ್ಕಾರಿ ಕೇಸರಿ ದಾಲ್ ರೂಪದಲ್ಲಿ ಕೊಡಲಾಗುತ್ತಿದ್ದು ಇದನ್ನು ತಡೆಯುದೇಕೆಂದು ಪ್ರಾರ್ಥಿಸಿಕೊಂಡಿದ್ದಾರೆ. ಇದನ್ನು ಕಾರ್ಮಿಕ ಮಂತ್ರಿ ಭಗವತ್ ಝಾ ಆಜಾದ್ ಲೋಕ ಸಭೆಯಲ್ಲಿ ಅಲ್ಲಗಳೆದಿದ್ದಾರೆ; ಆದರೆ ಇದು ಹಸಿ ಸುಳ್ಳು. 60 ವರ್ಷಗಳ ಹಿಂದೆ ಜುಲೈ 1922 ಇಂಡಿಯನ್ ಮೆಡಿಕಲ್ ಗೆಜೆಟ್‌ನಲ್ಲಿ ಮೇಜರ್ ಆ್ಯಕ್ಟನ್ ಅವರು ಈ ಬಗ್ಗೆ ಮಾಡಿರುವ ಉಲ್ಲೇಖವಿದೆ. 1955-60ರಲ್ಲಿ ಇಂಡಿಯನ್ ಕೌನ್ಸಿಲ್ ಆಫ್ ಮೆಡಿಕಲ್ ರಿಸರ್ಚ್ ಮತ್ತು 1978ರಲ್ಲಿ ಗಾಂಧೀ ಶಾಂತಿ ಪ್ರತಿಷ್ಠಾನದವರು ಈ ರೋಗದ ಬಗ್ಗೆ ನಡೆಸಿದ ಸಮೀಕ್ಷೆಯಲ್ಲಿ ಈ ಆಚರಣೆ ಬಗ್ಗೆ ಬರೆದಿದ್ದಾರೆ.

ಆದರೂ ರಾಜಕೀಯ ಮತ್ತು ಆಡಳಿತ ನಿರ್ಲಕ್ಷದ ವಿಂಧ್ಯಪರ್ವತಗಳು ಭೂಮಾಲಿಕರ ಹಿತಾಸಕ್ತಿಗಳ ರಕ್ಷಣೆಯಲ್ಲಿ ಈ ವಿದ್ಯಮಾನಗಳಿಂದ ವಿಚಲಿತವಾಗದೆ ನಿಂತಿವೆ.

—'ಇಂಡಿಯನ್ ಎಕ್ಸ್‌ಪ್ರೆಸ್

● ಸಂತಾಲ್ ಪರಗಣ ಆದಿವಾಸಿ ಜಿಲ್ಲೆಯ ಮಧುಪುರ ಬ್ಲಾಕ್‌ನ 532 ಹಳ್ಳಿಗಳಲ್ಲಿರುವ ಒಂದು ಲಕ್ಷ ಜನ ಸಂಖ್ಯೆಯ ಶೇಕಡಾ 80ಕ್ಕೂ ಹೆಚ್ಚು ಜನ ಅರೆ-ಹಸಿವಿನಿಂದ ನರಳುತ್ತಿದ್ದಾರೆ.

—ಇ. ಎನ್. ಎಸ್.

● ನಂಬಿದರೆ ನಂಬಿ ಬಿಟ್ಟರೆ ಬಿಟ್ಟರೆ ಬಿಡಿ. ಕಳೆದ 12 ವರ್ಷಗಳಿಂದ ಬಿಹಾರ ವಿಧಾನ ಪರಿಷತ್ತಿನಲ್ಲಿ 22 ಸದಸ್ಯರ ಜಾಗ ಖಾಲಿ ಬಿದ್ದಿವೆ. ಈ ಮೇನಿಂದ ಇನ್ನೂ 17 ಜಾಗಳು ಖಾಲಿ ಬೀಳಲಿವೆ. ಒಟ್ಟು ಸದಸ್ಯರ ಸಂಖ್ಯೆ 96. ಖಾಲಿ ಇರುವ ಜಾಗಗಳು ಅಧ್ಯಾಪಕರ, ಪದವೀಧರರ ಮತ್ತು ಸ್ಥಳೀಯ ಸಂಸ್ಥೆಗಳಿಂದ ಪ್ರಾತಿನಿಧ್ಯವಿರುವವು ಎಂಬುದು ಗಮನಾರ್ಹ.

—ಇ.ಎನ್.ಎಸ್.

● ಅಭಿವೃದ್ಧಿಯ ಮೊರೆತ ನಿಂತು ಹೋಗಿದೆ-ಬದುಕನ್ನೇ ನಿರಾಕರಿಸುವ ಬಡತನ ಕೊನೆಗೊಂಡೀತೆಂಬ ಆಸೆ ಇಷ್ಟೊಂದು ಕ್ಷೀಣ ಸ್ಥಿತಿ ತಲುಪಿದ್ದನ್ನು ಈ ಹಿಂದಿನ ಯಾವ ಪೀಳಿಗೆಯೂ ಕಂಡಿರಲಿಲ್ಲ.

—ಯುನಿಸೆಫ್ ವರದಿಯಿಂದ

● ಕಂದಾಯ ಇಲಾಖೆಯ ಅಧಿಕಾರಿಗಳ ನಿವಾಸಗಳನ್ನು ಮುತ್ತುವ, ಜಪ್ತಿ ನಡೆಸುವ ರೈತ ಸಂಘದ ಕಾರ್ಯಕ್ರಮ ಇಂದು ಶಿವಮೊಗ್ಗಾ ಜಿಲ್ಲೆಯಲ್ಲಿ ಬಿರುಸಿನಿಂದ ಆರಂಭವಾಯಿತು.

—ಪ್ರಜಾವಾಣಿ ಏ. 16

Printed & Published by P. Ramachandra Rao by him on behalf of the Communist Party of India (Marxist) Karnataka State Committee, L-56 K. V. Temple Street Sultanpet, Bangalore-560 053 Editorial and managerial office :L-56, K. V. Temple Street ,Sultanpet, Bangalore-560 053. Phone-24154. Printed at Ravee Traders, No. 8/1, J. M. Lane, Balepet Cross, Bangalore-560 053. EDITOR ; M. K. BHAT.